ದೆಹಲಿ ಕರ್ನಾಟಕ ಸಂಘದ

# ಅಭಿಮತ

ಮಾರ್ಚ್ 2021
ಬೆಲೆ ರೂ. 1




ಡಾ. ಪುರುಷೋತ್ತಮ ಬಿಳಿಮಲೆ
ಅವರಿಗೆ ಮಾಸ್ತಿ ಪ್ರಶಸ್ತಿ



## ಮರಳಿ ತಾಯ್ನಾಡಿಗೆ

# ಡಾ. ಪುರುಷೋತ್ತಮ ಬಿಳಿಮಲೆ ಅವರಿಗೆ ಮಾಸ್ತಿ ಪ್ರಶಸ್ತಿ

ಹಿರಿಯ ಸಾಹಿತಿ, ಪ್ರಾಧ್ಯಾಪಕ ಮತ್ತು ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷರೂ ಆಗಿರುವ ಡಾ. ಪುರುಷೋತ್ತಮ ಬಿಳಿಮಲೆ ಅವರನ್ನು ಈ ಸಾಲಿನ ಮಾಸ್ತಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಸಂಶೋಧನಾ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಗಾಗಿ ಪುರುಷೋತ್ತಮ ಬಿಳಿಮಲೆ ಅವರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ.



ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್ ವತಿಯಿಂದ ನೀಡಲಾಗುವ ಈ ಪ್ರಶಸ್ತಿ 25,000/- ನಗದು, ಮಾಸ್ತಿ ಪ್ರಶಸ್ತಿ ಫಲಕ ಹಾಗೂ ಸನ್ಮಾನ ಒಳಗೊಂಡಿದೆ.

ಡಾ. ಪುರುಷೋತ್ತಮ ಬಿಳಿಮಲೆ ಅವರೊಂದಿಗೆ ಪತ್ರಕರ್ತೆ, ಸಾಹಿತಿ, ಸಂಧ್ಯಾ ಎಸ್. ಪೈ, ವಿಮರ್ಶಕ ಆರ್. ವಿಜಯ ಶಂಕರ, ಕವಿ ಸುಬ್ರಾಯ ಚೊಕ್ಕಾಡಿ ಹಾಗೂ ಕಥೆಗಾರ ಕೇಶವ ರೆಡ್ಡಿ ಹಂದ್ರಾಳ ಮತ್ತು ಸಾಹಿತಿ ಸ. ರಘುನಾಥ ಪ್ರಶಸ್ತಿ ಪಡೆಯಲಿದ್ದಾರೆ.

ಮಾರ್ಚ್ 27ರಂದು ಬೆಂಗಳೂರಿನ ಭಾರತೀಯ ವಿದ್ಯಾ ಭವನ ಸಭಾಂಗಣದಲ್ಲಿ ಪ್ರಶಸ್ತಿ ಪ್ರಧಾನ ಕಾರ್ಯಕ್ರಮ ನಡೆಯಲಿದೆ ಎಂದು ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಟ್ರಸ್ಟ್‌ನ ಅಧ್ಯಕ್ಷ ಮಾವಿನಕೆರೆ ರಂಗನಾಥನ್ ತಿಳಿಸಿದ್ದಾರೆ.

ಮಾಸ್ತಿ ಪ್ರಶಸ್ತಿಗೆ ಭಾಜನರಾಗಿರುವ ಡಾ. ಪುರುಷೋತ್ತಮ ಬಿಳಿಮಲೆ ಅವರಿಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು.




ದಿನಾಂಕ 06.03.2021ರಂದು ದೆಹಲಿ ಕರ್ನಾಟಕ ಸಂಘದ ಸಮೀಪದ ರಾಘವೇಂದ್ರ ಮಠಕ್ಕೆ ಕರ್ನಾಟಕದ ನೂತನ ಕನ್ನಡ ಮತ್ತು ಸಂಸ್ಕೃತಿ ಸಚಿವ ಸನ್ಮಾನ್ಯ ಅರವಿಂದ ಲಿಂಬಾವಳಿ ಅವರು ಭೇಟಿ ನೀಡಿದರು. ಈ ಸಂದರ್ಭದಲ್ಲಿ ದೆಹಲಿ ಕನಾಟಕ ಸಂಘದ ಜಂಟಿ ಕಾರ್ಯದರ್ಶಿ ರಾಧಾಕೃಷ್ಣ ಮತ್ತು ಕಾರ್ಯಕಾರಿ ಸಮಿತಿ ಸದಸ್ಯ ಶಿವಪ್ಪ ಎಂ. ಹಾಗೂ ಸಿಬ್ಬಂದಿ ವರ್ಗದವರು ಹೂಗುಚ್ಛ ನೀಡಿ ಅಭಿನಂದಿಸಿದರು.

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಪ್ರಧಾನ ಸಂಪಾದಕ
ಡಾ. ಅವನೀಂದ್ರನಾಥ್ ರಾವ್

ಸಂಪಾದಕ ಮಂಡಳ ಸದಸ್ಯರು
ಚಂದ್ರಶೇಖರ ಜೋಳದರಾಶಿ
ಎಸ್. ಕುಮಾರ್
ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ

ಅಧ್ಯಕ್ಷ
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಡಾ. ಅವನೀಂದ್ರನಾಥ್ ರಾವ್
ಜಮುನಾ ಸಿ. ಮಠದ

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಕೋಶಾಧಿಕಾರಿ
ಆಶಾಲತಾ ಎಂ.

ಜಂಟಿ ಕಾರ್ಯದರ್ಶಿಗಳು
ರಾಧಾಕೃಷ್ಣ
ಪೂಜಾ ರಾವ್

ಸಮಿತಿ ಸದಸ್ಯರು
ಡಾ. ಎಂ.ಎಸ್. ಶಶಿಕುಮಾರ್
ಶಿವಾನಂದ ಎಸ್. ಇಂಗಳೇಶ್ವರ
ಶ್ರೀನಾಥ್ ಎನ್.ಆರ್
ಸವಿತಾ ನೆಲ್ಲಿ
ಶಿವಪ್ಪ ಎಂ.
ಸಂತೋಷ ಜೆ.
ಶೋಭಾ ಗೌಡ
ಸುಮಿತಾ ಮುರಗೋಡ
ಆರ್. ರೇಣುಕುಮಾರ್
ಟಿ.ಎಂ. ಮೈಲಾರಪ್ಪ

ಕಾವಲು ಸಮಿತಿ
ಅನಂತರಾಮು ಅರಳ
ಡಿ.ವಿ.ಎಸ್. ಮೂರ್ತಿ
ಈಶ್ವರ ಮಡಿವಾಳ

ಸಂಪುಟ 31 । ಸಂಚಿಕೆ 6
ಮಾರ್ಚ್ 2021

## ಸಂಪಾದಕೀಯ

# ತಾಯ್ನಾಡಿಗೆ ಮರಳುವ ತವಕ ತಲ್ಲಣಗಳು

ಉನ್ನತ ಭವಿಷ್ಯವನ್ನು ರೂಪಿಸಿಕೊಳ್ಳಲು ಮತ್ತು ಕೆಲವೊಮ್ಮೆ ಹೊಟ್ಟೆಪಾಡಿಗಾಗಿ ಹಲವರು ಹೊರನಾಡಿಗೆ ಬಂದು ನೆಲೆಸುತ್ತಾರೆ. ಕರ್ನಾಟಕದಿಂದ ಈ ರೀತಿಯಲ್ಲಿ ದೆಹಲಿ ಮತ್ತು ಎನ್.ಸಿ.ಆರ್. ಭಾಗದಲ್ಲಿ ಕನ್ನಡಿಗರು ಹಲವು ದಶಕಗಳಿಂದ ವಾಸವಾಗಿದ್ದಾರೆ. ಆರು ತಿಂಗಳು ಇಲ್ಲವೇ ವರುಷದ ಬಳಿಕ ಮರಳಿ ಊರಿಗೆ ತೆರಳುವ ಕನ್ನಡಿಗರಿಂದ ತೊಡಗಿ ದಶಕಗಳ ಕಾಲ ಇಲ್ಲಿಯೇ ಇದ್ದು ಬದುಕನ್ನು ಕಟ್ಟಿಕೊಂಡು ನಂತರ ಹುಟ್ಟೂರಿಗೆ ಮರಳುವವರೂ ಇದ್ದಾರೆ. ಸುದೀರ್ಘ ಕಾಲ ಹೊರನಾಡಿನಲ್ಲಿ ಇದ್ದು ನಂತರ ಮರಳಿ ತಾಯ್ನಾಡನ್ನು ಸೇರುವುದು ಒಂದು ವಿಶೇಷ ಅನುಭವ ಮತ್ತು ಭಾವನಾತ್ಮಕವಾಗಿ ಹಲವು ಬಗೆಯ ತವಕ ತಲ್ಲಣಗಳಿಗೆ ಕಾರಣವಾಗುತ್ತದೆ.

ದೆಹಲಿಯಲ್ಲಿ ಕಳೆದ ಇಪ್ಪತ್ತನಾಲ್ಕು ವರ್ಷಗಳಿಂದ ನೆಲೆಸಿದ್ದ ಹಿರಿಯ ಕವಿ, ನಾಟಕಕಾರ, ಪ್ರಾಧ್ಯಾಪಕ ಡಾ. ಎಚ್.ಎಸ್. ಶಿವಪ್ರಕಾಶ್ ಅವರು ಇದೀಗ ಕರ್ನಾಟಕಕ್ಕೆ ಮರಳಿದ್ದಾರೆ. ಅಲ್ಲದೆ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರೂ ಆಗಿದ್ದ, ದೆಹಲಿ ಎನ್.ಸಿ.ಆರ್. ಭಾಗವಾದ ಭಿವಾಡಿ, ಗುರುಗ್ರಾಮಗಳಲ್ಲಿ ಕಳೆದ ಎರಡು ದಶಕಗಳಿಂದ ನೆಲೆಸಿದ್ದ ಹದಿನೈದು ಮಂದಿ ಕನ್ನಡಿಗರು ಈಚೆಗೆ ತಾಯ್ನಾಡಿಗೆ ಮರಳಿದ್ದಾರೆ. ಕಳೆದ ತಿಂಗಳು ಇವರೆಲ್ಲರಿಗೂ ಸಂಘ ವಿದಾಯಕೂಟವನ್ನು ಆಯೋಜಿಸಿದಾಗ ಅದು ಭಾವನಾತ್ಮಕ ಕ್ಷಣಗಳಿಗೆ ಸಾಕ್ಷಿಯಾಯಿತು. ಹೆಚ್ಚಿನವರು ತಮ್ಮ ಅನುಭವಗಳನ್ನು, ಇಲ್ಲಿ ಕಳೆದ ಮಧುರ ಕ್ಷಣಗಳನ್ನು ಮೆಲುಕು ಹಾಕಿದರು. ತಾವು ನೆಲೆನಿಂತ ಪ್ರದೇಶವನ್ನೇ ಕರ್ನಾಟಕವನ್ನಾಗಿ ಮಾಡಿಕೊಂಡಿದ್ದ ಕನ್ನಡದ ಈ ಸಹೋದರರು ಕನ್ನಡತನವನ್ನು ಮೆರೆದಿದ್ದರು.

ಸುದೀರ್ಘ ಕಾಲ ಹೊರನಾಡಿನಲ್ಲಿದ್ದು ಮರಳಿ ಹುಟ್ಟೂರನ್ನು ಸೇರಬೇಕಾದ ಸನ್ನಿವೇಶದಲ್ಲಿ ಕಳೆದು ಹೋದ ದಿನಗಳ ಸವಿನೆನಪುಗಳೊಂದಿಗೆ ಮುಂದೆ ಹೊಸ ಬದುಕನ್ನು ಆರಂಭಿಸುವ ಕನಸು ಮತ್ತು ಯೋಜನೆ ಅವರಲ್ಲಿ ವ್ಯಕ್ತವಾಗುತ್ತಿತ್ತು.

ಇಲ್ಲಿ ಪಡೆದ ದಟ್ಟ ಅನುಭವಗಳ ಹಿನ್ನೆಲೆಯಲ್ಲಿ ಮುಂದೆ ಇನ್ನಷ್ಟು ಉನ್ನತಿಯನ್ನು ಸಾಧಿಸಬೇಕು ಎಂದು ಹಿರಿಯ ಕವಿ ಶಿವಪ್ರಕಾಶ್ ಆ ದಿನ ಸಂಜೆ ಹೇಳಿದ ಕಿವಿ ಮಾತು ಗಮನಾರ್ಹ. ಈ ನಿಟ್ಟಿನಲ್ಲಿ ಡಾ. ಎಚ್.ಎಸ್. ಶಿವಪ್ರಕಾಶ್ ಸ್ವತಃ ನಮಗೆ ಆದರ್ಶವಾಗುತ್ತಾರೆ. ಅವರು ನಾಡು ಮತ್ತು ಹೊರನಾಡು ಎರಡೂ ಕಡೆ ಸಫಲತೆಯನ್ನು ಕಂಡವರು. ದೆಹಲಿಗೆ ಬರುವ ಮುನ್ನವೇ ತಮ್ಮ ಸಾಹಿತ್ಯಿಕ, ಸಾಂಸ್ಕೃತಿಕ ಸಾಧನೆಗಳಿಂದ ಬೆಳಗಿದವರು. ಉಪನ್ಯಾಸಕರಾಗಿ ವೃತ್ತಿಯಲ್ಲಿದ್ದ ಶಿವಪ್ರಕಾಶ್ ಒಂದೊಮ್ಮೆ ಕರ್ನಾಟಕದಲ್ಲೇ ಇದ್ದಿದ್ದರೆ ಪ್ರಾಯಶಃ ಪ್ರಾಂಶುಪಾಲರಾಗಿ ನಿವೃತ್ತರಾಗುತ್ತಿದ್ದರು ಎಂದು ಯಾರಾದರೂ ಊಹಿಸಬಹುದು. ಆದರೆ ದೂರದ ದೆಹಲಿಗೆ ಬಂದು ಕೇಂದ್ರ ಸಾಹಿತ್ಯ ಅಕಾಡೆಮಿಯ 'ಇಂಡಿಯನ್ ಲಿಟರೇಚರ್'ನ ಸಂಪಾದಕರಾಗಿ, ಮುಂದೆ ಪ್ರತಿಷ್ಠಿತ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾದರು. ಅಲ್ಲಿಯೂ ನಿಲ್ಲದೆ ಮುಂದೆ ಭಾರತ ಸರಕಾರದಿಂದ ನೇಮಕಗೊಂಡು ಜರ್ಮನಿಯ ಟಾಗೋರ್ ಕೇಂದ್ರದ ನಿರ್ದೇಶಕರಾಗಿಯೂ ಮುನ್ನಡೆಸಿದರು.

ದೆಹಲಿ ಕರ್ನಾಟಕ ಸಂಘದ ನೂತನ ಕಟ್ಟಡದ ಉದ್ಘಾಟನೆ ವೇಳೆ (2005) ಶಿವಪ್ರಕಾಶ್ ಅವರು ಮಾಡಿದ ಭಾಷಣ ಮಹತ್ವಪೂರ್ಣ ಮತ್ತು ಈ ಸಂದರ್ಭದಲ್ಲಿ ಉಲ್ಲೇಖನಾರ್ಹ. ಶಿವ, ಪಾರ್ವತಿಯರಿಂದ ಹಣ್ಣನ್ನು ಪಡೆಯಲು ಗಣೇಶ, ಸುಬ್ರಹ್ಮಣ್ಯರಲ್ಲಿ ಸ್ಪರ್ಧೆ ಆದಾಗ ಸುಬ್ರಹ್ಮಣ್ಯ ಇಡೀ ಭೂಮಂಡಲ ಸುತ್ತಿ ಸ್ವತಃ 'ಪಳನಿ' ಆದ ಕಥೆಯನ್ನು ಅಂದು ಶಿವಪ್ರಕಾಶ್ ಹೇಳಿದ್ದರು. ಹೊರನಾಡಿನ ಕನ್ನಡಿಗರಿಗೆ ಸುಬ್ರಹ್ಮಣ್ಯ ಆದರ್ಶವಾಗಬೇಕು ಎಂಬ ಹಿರಿಯ ಕವಿಯ ಸಂದೇಶ ನಮ್ಮ ಚಲನಶೀಲ ಬದುಕಿಗೆ ಪ್ರೇರಣೆಯಾಗಬೇಕು.

ವಿದಾಯಕೂಟದ ನೆನಪಿನ ಸಂಜೆಯಲ್ಲಿ ಈಶ್ವರಲಿಂಗ ಅರೇರಾ ಅವರು ಹೇಳಿದ ಒಂದು ಮಾತು ತುಂಬಾ ಸತ್ಯ. ಹೊರನಾಡ ಕನ್ನಡಿಗರಲ್ಲಿ ದೆಹಲಿಯ ಕನ್ನಡಿಗರಿಗೆ ಒಂದು ವಿಶೇಷ ಅನುಕೂಲತೆ ಇದೆ. ಅದು ಈ ದೇಶದ ಮತ್ತು ನಾಡಿನ ಶ್ರೇಷ್ಠ ವ್ಯಕ್ತಿಗಳನ್ನು ಹತ್ತಿರದಿಂದ ಕಾಣುವ ಮತ್ತು ಸಂವಾದಿಸುವ ಅವಕಾಶ. ಇದು ಕೆಲವರಿಗೆ ಪ್ರತಿಷ್ಠೆಯ ವಿಷಯವಾದರೆ ಇನ್ನು ಕೆಲವರಿಗೆ ಮಹನೀಯರಿಂದ ಪ್ರೇರಣೆ ಪಡೆದು ಉನ್ನತಿಯನ್ನು ಸಾಧಿಸುವ ಮಾರ್ಗವೂ ಆಗಬಲ್ಲದು.

ಸುದೀರ್ಘ ಕಾಲ ದೆಹಲಿಯ ಅನುಭವಗಳ ಪಯಣದೊಂದಿಗೆ ತಾಯಿ ಮಡಿಲನ್ನು ಸೇರಿದ ನಮ್ಮ ಸಹೋದರರಿಗೆ ಮತ್ತು ಅವರ ಕುಟುಂಬಗಳಿಗೆ ಒಳಿತಾಗಲಿ ಎಂದು ನಾವು ಆಶಿಸುತ್ತೇವೆ.

ಡಾ. ಅವನೀಂದ್ರನಾಥ್ ರಾವ್

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 31 ಸಂಚಿಕೆ 6
ಮಾರ್ಚ್ 2021, ಬೆಲೆ ರೂ. 1

## ನಮ್ಮನಮ್ಮೊಳಗೆ

# ಕೊರೊನಾ ಲಾಕ್ ಡೌನ್ ವಾರ್ಷಿಕೋತ್ಸವ

ಕಳೆದ ಮಾರ್ಚ್ 2020 ರ ಹೊತ್ತಿಗೆ ನಮ್ಮೆಲ್ಲರ ಕೊರೊನಾದ ಜೊತೆಗಿನ ಹೋರಾಟ ಪ್ರಾರಂಭವಾಗಿದ್ದನ್ನು ನಾವು ನೆನೆಸಿಕೊಳ್ಳಬೇಕು. ಇದೊಂದು ವಿಚಿತ್ರವಾದ ಹೋರಾಟವೇ ಸರಿ. ಸರಕಾರವೇ ಇಡಿ ದೇಶವನ್ನು ಅವರವರ ಮನೆಯಲ್ಲೇ ಬಂಧಿಯಾಗಿರುವಂತೆ ತಾಕೀತು ಮಾಡಿದ್ದು ಅನಿವಾರ್ಯವಾದ ಹೆಜ್ಜೆಯೆಂಬುದನ್ನು ನಾವೆಲ್ಲರೂ ಒಪ್ಪಿಕೊಂಡು ಮುಂದಿನ ಹತ್ತಾರು ತಿಂಗಳುಗಳ ಕಾಲ ಮನೆಯೆಂಬುದರ ನಿಜವಾದ ಅರ್ಥವನ್ನು ಕಂಡುಕೊಂಡೆವು. ಮನೆಯಿಂದ ಹಕ್ಕಿಗಳಂತೆ ಹಾರಿ ಹೊರಡುತ್ತಿದ್ದವರೆಲ್ಲ ಅದರೊಳಕ್ಕೆ (ಮತ್ತು ಮನದೊಳಕ್ಕೆ) ಗಟ್ಟಿಯಾಗಿ ಕುಳಿತುಕೊಳ್ಳುವಂತಾಯಿತು. ಈ ನಮ್ಮನಮ್ಮೊಳಗಿನ ಹೋರಾಟ ಪ್ರಾರಂಭವಾಗಿ ಈಗ ಒಂದು ವರ್ಷ ಕಳೆದು ಹೋಯಿತೆಂಬುದೆ ಇನ್ನೊಂದು ವಿಚಿತ್ರವೆನಿಸುತ್ತಿದೆ. ಈಗ ನಾವು ನಿಧಾನವಾಗಿ ನಮ್ಮ ದೈನಂದಿನ ಬದುಕಿನ ಎಳೆಗಳನ್ನು ಮತ್ತೆ ಹಿಡಿದಿಡಲು ಪ್ರಯತ್ನಿಸುತ್ತಿರುವ ಸಂದರ್ಭದಲ್ಲಿ ಕೊರೊನಾದ ಆತಂಕ ಇನ್ನೂ ನಮ್ಮನ್ನು ಮತ್ತು ಇಡಿ ಜಗತ್ತನ್ನು ಬಿಟ್ಟಿಲ್ಲ. ಇದೊಂದು ನಿಜವಾಗಿಯೂ ಕೊರೊನಾ ಕಾಲದ ಸೆರೆಮನೆಯ ವಾರ್ಷಿಕೋತ್ಸವೆ ಸರಿ. ಆದರೆ, ಇದರಲ್ಲಿ ಯಾವ ಸಂಭ್ರಮವೂ ಇಲ್ಲ. ಅತ್ತ ವಿಷಾದವೂ ಇಲ್ಲ. ಆದರೆ ದೇಶದ ಕೋಟಿಗಟ್ಟಲೆ ಬಡಜನರ ಬದುಕನ್ನು ಇಂದಿಗೂ ಅಲ್ಲೋಲಕಲ್ಲೋಲವಾಗಿಸಿದ ಈ ಕೊರೊನಾದ ಸಂಕಷ್ಟವನ್ನು ಯಾವ ಸಂತಸದಲ್ಲಿ ಈ ವಾರ್ಷಿಕೋತ್ಸವದ ಅಂಗವಾಗಿ ನೆನೆಸಿಕೊಳ್ಳಬೇಕೆಂಬುದೇ ಅರಿವಾಗದ ಸಂಗತಿಯಾಗಿದೆ.

ಕೊರೊನಾದ ಈ ಕಾಲದಲ್ಲಿ ನಾವು ಹಲವು ಆತ್ಮೀಯರನ್ನು ಕಳೆದುಕೊಂಡಿದ್ದೇವೆ. ಕೆಲವರು ನಮ್ಮನ್ನು ಭೌತಿಕವಾಗಿ ಬಿಟ್ಟು ಹೋಗಿದ್ದಾರೆ. ಇನ್ನು ಹಲವರು ಈ ಕೊರೊನಾ ಹುಟ್ಟು ಹಾಕಿದ ಅರ್ಥಿಕ ಸಂಕಷ್ಟದ ಪರಿಣಾಮವಾಗಿ ದೆಹಲಿಯನ್ನು ತೊರೆದು ತಮ್ಮ ಊರುಗಳತ್ತ ಹೊಸ ಆಶಯಗಳನ್ನು ಅರಸುತ್ತ ಸಾಗಿದ್ದಾರೆ. ದೆಹಲಿಯಲ್ಲಿ ಮತ್ತು ದೆಹಲಿಯ ಸುತ್ತಮುತ್ತಲಿನ ರಾಜಧಾನಿ ಪ್ರದೇಶದಲ್ಲಿನ (ಗುರುಗಾಂವ್–ಭಿವಾಡಿ, ನೊಯಿಡಾ ಮತ್ತು ಫರಿದಾಬಾದ್) ನಮ್ಮ ಹಲವಾರು ದೆಹಲಿ ಕರ್ನಾಟಕ ಸಂಘದ ಸಕ್ರಿಯ ಸದಸ್ಯರು ಮತ್ತು ಅಲ್ಲಿನ ಕನ್ನಡ ಸಂಘಟನೆಗಳಲ್ಲಿ ತೊಡಗಿಕೊಂಡಿರುವ ನೂರಾರು ಕನ್ನಡಿಗರು ತಮ್ಮ ವೃತ್ತಿಯಿಂದ ಸ್ವಯಂ ನಿವೃತ್ತಿ ಪಡೆದು ಸದ್ಯದಲ್ಲೆ ತಾಯ್ನಾಡಿನತ್ತ ತೆರಳಲಿದ್ದಾರೆ. ಅವರಿಗಾಗಿ ನಾವು ಸಂಘದಲ್ಲಿ ಕಳೆದ ಕೆಲ ದಿನಗಳ ಹಿಂದೆ ಆತ್ಮೀಯವಾದ ಬೀಳ್ಕೊಡುಗೆಯ ಸಮಾರಂಭವನ್ನು ಹಮ್ಮಿಕೊಂಡಿದ್ದೆವು. ಈ ಸಮಾರಂಭ ನಮಗಾರಿಗೂ ಸಂತಸದ ಸಮಾರಂಭವಾಗಿರಲಿಲ್ಲ. ಸ್ವಯಂ ನಿವೃತ್ತಿ ಪಡೆದ ನಮ್ಮೆಲ್ಲರ ಈ ನೂರಾರು ಸ್ನೇಹಿತರು ಅವರ ಇಚ್ಛೆಯಿಂದಾಗಿ ಅದನ್ನು ಪಡೆದಿದ್ದಲ್ಲವೆಂಬುದನ್ನು ನಾವು ಗಮನಿಸಬೇಕು. ಇನ್ನೂ ಅವರೆಲ್ಲರೂ ಕೆಲಸ ಮಾಡುವ ಮತ್ತು ಜಗತ್ತನ್ನು ಕಾಣುವ ಹುಮ್ಮಸ್ಸು ಇದ್ದವರು. ಅವರೆಲ್ಲರಿಗೂ ಇನ್ನೂ ಅದ್ಭುತವಾದ ಅವಕಾಶಗಳು ಮತ್ತು ಹೊಸ ಜೀವನದ ಮೆಟ್ಟಿಲುಗಳು ಮೂಡಲಿ ಎಂದು ನಾನು ಮತ್ತು ನನ್ನ ಎಲ್ಲ ಸಹಯೋಗಿಗಳು ಹಾರ್ದಿಕವಾಗಿ ಆಶಿಸುತ್ತೇವೆ.

ಹಲವಾರು ದೇಶಗಳ ಅರ್ಥಿಕ ವ್ಯವಸ್ಥೆಗಳನ್ನು ಏರುಪೇರು ಮಾಡಿದ ಈ ಕೊರೊನಾವನ್ನು ಹದ್ದುಬಸ್ತಿನಲ್ಲಿಡಲು ಬಂದ ಲಸಿಕೆಗಳು ನಮಗೆ ಹೊಸ ಆಶಾಕಿರಣವನ್ನು ನೀಡುತ್ತಿವೆಯೆಂಬುದನ್ನು ಒಪ್ಪಿಕೊಳ್ಳಬೇಕು. ಆದರೆ, ಈ ಎಲ್ಲ ಲಸಿಕೆಗಳಿಂದ ನಾವು ಪೂರಾ ಕೊರೊನಾ–ಮುಕ್ತರಾಗುವುದರ ಬಗೆಗೂ ಖಚಿತತೆಯಿಲ್ಲ. ಈ ಎಲ್ಲ ಲಸಿಕೆಗಳ ಸಂಭ್ರಮದ ನಡುವೆ ಎಲ್ಲ ಪರಿಣಿತರು ಮತ್ತು ಸರಕಾರ ಹೇಳುವುದೊಂದೆ 'ಮುಖವಾಡವಿರಲಿ' ಮತ್ತು 'ಸಾಮಾಜಿಕ ಅಂತರವಿರಲಿ'. ಇನ್ನೂ ಈ ಕೊರೊನಾದ ವಿವಿಧ ರೂಪಗಳು ಮೈದಾಳುತ್ತಿರುವುದನ್ನು ನಾವು ಕಾಣಬಹುದು. ಈ ರೂಪಾಂತರಿ ಕೊರೊನಾದ ಅಣುಜೀವಿಗಳು ಇನ್ನೂ ಹತ್ತಾರು ಪಟ್ಟು ತ್ವರಿತವಾಗಿ ತಮ್ಮ ಬೇಟೆಗಳನ್ನಾಡಲು ಸಫಲರು ಎಂಬುದು ನಮಗೆಲ್ಲ ಆತಂಕದ ಸಂಗತಿಯಾಗಬೇಕು. 'ಅತ್ತ ದರಿ ಇತ್ತ ಪುಲಿ'ಯೆಂಬಂತಹ ಸನ್ನಿವೇಶ ನಮ್ಮದು. ಎಚ್ಚರಿಕೆಯ ಗಂಟೆಗಳ ನಡುವೆ ನಾವು ಇನ್ನೂ ಕೆಲಕಾಲ ಬದುಕುವುದು ಅನಿವಾರ್ಯವಾಗಿದೆ. ಎಂಟು ರಾಜ್ಯಗಳಲ್ಲಿ ಮತ್ತು ಕೆಲ ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ಗಂಟೆಯನ್ನು ಸರಕಾರ ಆಗಲೆ ಬಾರಿಸಿದೆ. ದೆಹಲಿಯಲ್ಲಿ ಅಲ್ಲಲ್ಲಿ ಕೊರೊನಾದ ಹಾವಳಿ ಮತ್ತೆ ತಲೆಯೆತ್ತುತ್ತಿದೆಯೆಂಬ ವರದಿಗಳಿವೆ.

ಇವೆಲ್ಲದರ ನಡುವೆ ದೆಹಲಿ ಕರ್ನಾಟಕ ಸಂಘ ತನ್ನ ಚಟುವಟಿಕೆಗಳನ್ನು ನಿರಂತರವಾಗಿ ಮತ್ತು ಆದಷ್ಟು ಸಾಮಾನ್ಯವಾಗಿ ನಡೆಸಿಕೊಂಡು ಬರುವ ಪ್ರಯತ್ನವನ್ನು ಮಾಡುತ್ತಿದೆ. ಜಾಲತಾಣದ ಮೂಲಕ ಕಳೆದ ಬಾರಿಯ ರಾಜ್ಯೋತ್ಸವದ ಕಾರ್ಯಕ್ರಮಗಳನ್ನು ನವೆಂಬರನಲ್ಲಿ ಪ್ರತಿವಾರವೂ ಹಮ್ಮಿಕೊಳ್ಳುವುದರ ಮೂಲಕ ನಾವು ಒಂದು ಬಗೆಯ ದಾಖಲೆಯನ್ನೇ ಸೃಷ್ಟಿಸಿದಂತಾಗಿದೆ. ಅದರ ನಂತರದಲ್ಲೂ ಹಲವಾರು ಸಂಗೀತ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಾವು ಜಾಲತಾಣದ ಮೂಲಕವೆ ಆಯೊಜಿಸಿದ್ದೇವೆ. ಈ ವರ್ಷದ ಮೊದಲಲ್ಲಿ ನಾವು ಸಂಘದ ಕಳೆದ ಬಾರಿಯ ವಾರ್ಷಿಕ ಮಹಾಸಭೆಯನ್ನು ಜಾಲತಾಣದ ಮೂಲಕ ಹಮ್ಮಿಕೊಂಡಿದ್ದೆವು. ಇತ್ತೀಚಿನವರೆಗೆ ಸಂಘದ ಕಾರ್ಯಕಾರಿ ಸಮಿತಿಯ ಸಭೆಗಳನ್ನೂ ಸಹ ಜಾಲತಾಣದ ಮೂಲಕವೇ ನಡೆಸುತ್ತಿದ್ದೆವು. ಈಗ ಕಳೆದ ಎರಡು ಕಾರ್ಯಕಾರಿ ಸಮಿತಿಯ ಸಭೆಗಳನ್ನು ಸಂಘದ ಆವರಣದಲ್ಲಿ ಎಲ್ಲ ಸರಕಾರಿ ಕೋವಿಡ್‌ನ ನಿಯಮಾವಳಿಗಳನ್ನು ಗಮನದಲ್ಲಿಟ್ಟುಕೊಂಡು ನಡೆಸಿಕೊಂಡು ಬಂದಿದ್ದೇವೆ. ಹಾಗೆಯೇ ಸಂಘದ ಮುಖಪತ್ರಿಕೆ ಅಭಿಮತದ ಪ್ರಕಟಣೆಯನ್ನು ಸಂಪಾದಕ ಮಂಡಳಿ ಯಶಸ್ವಿಯಾಗಿ ಕಾಲಕಾಲಕ್ಕೂ ಪ್ರಕಟಿಸುತ್ತ ಬಂದಿದೆ. ಜೊತೆಗೆ ಅಭಿಮತದ ಪ್ರತಿಗಳನ್ನು ಅಚ್ಚು ಹಾಕಿ ಎಲ್ಲರಿಗೂ ಅಂಚೆಯ ಮೂಲಕ ಕಳುಹಿಸುವ ಕೆಲಸವನ್ನೂ ಸಹ ಪುನರಾರಂಭಿಸಲಾಗಿದೆ. ಕಾರ್ಯಕಾರಿ ಸಮಿತಿಯ ನಿರ್ಧಾರದಂತೆ ಮಾರ್ಚ್ 13 ರಿಂದ ಸಂಘದ ಆಟೋಟ ಮತ್ತು ಕ್ರಿಕೆಟ್ ಪಂದ್ಯಾವಳಿಗಳನ್ನು ಮುಂದಿನ ಎರಡು ವಾರಾಂತ್ಯಗಳಲ್ಲಿ ಆಯೋಜಿಸುತ್ತಿದ್ದೇವೆ. ಕ್ರಿಕೆಟ್ ಪಂದ್ಯಗಳು ಎಂದಿನ ವರ್ಷದಂತೆ ಈ ಬಾರಿಯೂ ತಾಲ್ಕತೋರಾ ಮೈದಾನದಲ್ಲಿ ಮಾರ್ಚ್ 13 ಮತ್ತು 14 ರಂದು ನಡೆಯಲಿವೆ. ನಂತರದ ಉಳಿದ ಆಟೋಟ ಸ್ಪರ್ಧೆಗಳನ್ನು ದೆಹಲಿ ಕನ್ನಡ ಶಾಲೆಯ ಆವರಣದಲ್ಲಿ ಆಯೋಜಿಸಲಿದ್ದೇವೆ.

ಈ ಎಲ್ಲ ಚಟುವಟಿಕೆಗಳ ನಡುವೆ ಸಂಘದ ಹಾಲಿ ಕಾರ್ಯಕಾರಿ ಸಮಿತಿಯ ಕಾರ್ಯಾವಧಿ ಮುಂದಿನ ತಿಂಗಳು ವಿದ್ಯುಕ್ತವಾಗಿ ಮತ್ತು ಸಂಘದ ನಿಯಮಾವಳಿಗಳ ಪ್ರಕಾರ ಮುಕ್ತಾಯವಾಗಲಿದೆ. ಹೀಗಾಗಿ ಸಂಘದ ನೂತನ ಕಾರ್ಯಕಾರಿ ಸಮಿತಿಯನ್ನು ತಾವೆಲ್ಲರೂ ಸಂಘದ ಸಂವಿಧಾನದನ್ವಯ ಚುನಾಯಿಸಬೇಕಾದ್ದು ಅನಿವಾರ್ಯವಾಗಿದೆ. ಆದರೆ, ಇವೆಲ್ಲವೂ ಸರಕಾರದ ಕೋವಿಡ್ ನಿಯಮಾವಳಿಗಳ ಅನ್ವಯವೇ ನಡೆಯಬೇಕಾಗಿದೆ. ಅವುಗಳನ್ನು ಗಮನದಲ್ಲಿಟ್ಟುಕೊಂಡು ತನ್ನ ಬರುವ ಸಭೆಯಲ್ಲಿ ಈ ಕುರಿತಾಗಿ ಸಂಘದ ಕಾರ್ಯಕಾರಿ ಸಮಿತಿಯು ತನ್ನ ನಿರ್ಣಯವನ್ನು ತೆಗೆದುಕೊಳ್ಳಲಿದೆ. ಈಗಿನ ಸರಕಾರದ ನಿಯಮಾವಳಿಗಳ ಪ್ರಕಾರ ತೆರೆದ ಜಾಗೆಗಳಲ್ಲಿ ಜನ ಸೇರುವುದಕ್ಕೆ ಅನುಮತಿಯಿದೆ. ಅದರಲ್ಲೂ ಕ್ರೀಡಾ ಮತ್ತು ಇತರ ಚಟುವಟಿಕೆಗಳಿಗೆ ತೆರೆದ ಜಾಗಗಳಲ್ಲಿ ಕೋವಿಡ್‌ನ ನಿಯಮಗಳನುಸಾರವಾಗಿ ನಡೆಸುವುದಕ್ಕೆ ಅನುಮತಿಯಿದೆ. ಅದೆ ರೀತಿಯಲ್ಲಿ ಸಂಘದ ನೂತನ ಕಾರ್ಯಕಾರಿ ಸಮಿತಿಯನ್ನು ಚುನಾಯಿಸುವ ಕುರಿತಂತೆ ಚುನಾವಣಾ ಪ್ರಕ್ರಿಯೆಗಳನ್ನು ಮುಂಬರುವ ದಿನಗಳಲ್ಲಿ ಸರಕಾರದ ಕೋವಿಡ್ ನಿಯಮಾವಳಿಗಳ ಪ್ರಕಾರ ನಿರ್ಧಾರ ತೆಗೆದುಕೊಳ್ಳುವುದರ ಬಗ್ಗೆ ನಾವೆಲ್ಲರೂ ಕಟಿಬದ್ಧರಾಗಿದ್ದೇವೆ.

***ಡಾ. ವೆಂಕಟಾಚಲ ಹೆಗಡೆ***
***ಅಧ್ಯಕ್ಷರು***

## ಮುನ್ನೋಟ

ಆತ್ಮೀಯ ಕನ್ನಡ ಬಂಧುಗಳೇ ಹಾಗೂ ಸಹೋದರಿಯರೇ, ತಮಗೆಲ್ಲರಿಗೂ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳು.

ಇದೇ ತಿಂಗಳ 13 ಮತ್ತು 14ರಂದು ವಾರ್ಷಿಕ ಆಟೋಟಗಳು ಜರುಗಲಿವೆ. ಮೊದಲಿಗೆ ಕ್ರಿಕೆಟ್ ಪಂದ್ಯಾವಳಿಯನ್ನು ತಾಲ್ಕತೋರಾ ಕ್ರಿಕೆಟ್ ಮೈದಾನದಲ್ಲಿ ಆಯೋಜನೆ ಮಾಡಲಾಗಿದೆ. ಈ ಬಾರಿ ಪಂದ್ಯಾವಳಿಯಲ್ಲಿ ಅತಿ ಹೆಚ್ಚು 15 ತಂಡಗಳು ಭಾಗವಹಿಸಿವೆ. ಬರುವ ಇಪ್ಪತ್ತೊಂದರಂದು ಆಟೋಟಗಳು ನಮ್ಮ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ನಡೆಯಲಿವೆ. ಸದಸ್ಯರು ದಯವಿಟ್ಟು ಬಂದು ಭಾಗವಹಿಸಬೇಕಾಗಿ ವಿನಂತಿ.

ಈ ಎಲ್ಲಾ ಕಾರ್ಯ ಚಟುವಟಿಕೆಗಳ ಜೊತೆಗೆ ಬರುವ ಏಪ್ರಿಲ್‌ನಲ್ಲಿ ಕಾರ್ಯಕಾರಿ ಸಮಿತಿಯ ಕಾಲಾವಧಿ ಮುಕ್ತಾಯವಾಗುತ್ತದೆ. ಹೊಸ ಕಾರ್ಯಕಾರಿ ಸಮಿತಿಯು ಬರಬೇಕು.

ಒಂದು ವರ್ಷ ಅತ್ಯುತ್ತಮ ಕಾರ್ಯಕ್ರಮಗಳನ್ನು ನೀಡಿದ್ದೇವೆ. ತಾವೆಲ್ಲರೂ ಭಾಗವಹಿಸಿದ್ದೀರಿ. ಮಾರಕ ರೋಗ ಕೊರೊನಾದಿಂದ ಈ ವರ್ಷ ಸಂಪೂರ್ಣವಾಗಿ ಕಾರ್ಯಕ್ರಮಗಳಲ್ಲಿ ವ್ಯತ್ಯಯ ಕಂಡು ಬಂದಿದೆ. ಬರುವ ದಿನಗಳಲ್ಲಿ ಇನ್ನೂ ಅತ್ಯುತ್ತಮ ಕಾರ್ಯಕ್ರಮಗಳನ್ನು ತಮ್ಮ ಮುಂದೆ ತರಬೇಕೆಂಬುದು ಮನದಾಸೆ. ಆದಷ್ಟು ಬೇಗನೆ ಕೊರೊನಾ ಮುಕ್ತವಾಗುತ್ತಾ ಬರುತ್ತಿದೆ. ಲಸಿಕೆಗಳು ಈಗಾಗಲೇ ಬಂದಿವೆ. ಕೆಲ ತಿಂಗಳ ನಂತರ ಸಂಘದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡೋಣ. ಬರುವ ಯುಗಾದಿ ಹೊಸ ವರ್ಷದಲ್ಲಿ ಹರ್ಷವೂ ತಮ್ಮ ಬಾಳಲ್ಲಿ ಬರಲೆಂದು ಆಶಿಸುತ್ತೇನೆ.

ಗುರ್‌ಗಾಂವ್ ಕನ್ನಡ ಸಂಘಕ್ಕೆ ಹೊಸ ಕಾರ್ಯಕಾರಿ ಸಮಿತಿ ಆಯ್ಕೆಗೊಂಡಿದೆ. ಅಧ್ಯಕ್ಷರಾಗಿ ಶ್ರೀ ಶಾಂತಕುಮಾರ್ ನಿಂಬಾಳ್, ಪ್ರಧಾನ ಕಾರ್ಯದರ್ಶಿಯಾಗಿ ಶ್ರೀ ಸಂತೋಷ್ ಜೆ, ಖಜಾಂಚಿಯಾಗಿ ಶ್ರೀ ಮರಿಬಸಪ್ಪ ಎಂ, ಮತ್ತು ಇವರ ಜೊತೆ ಆಯ್ಕೆಯಾಗಿರುವ ಎಲ್ಲಾ ಪದಾಧಿಕಾರಿಗಳು ಮತ್ತು ಸದಸ್ಯರಿಗೆ ಅಭಿನಂದನೆಗಳು.

ಗುರ್‌ಗಾಂವ್ ಕನ್ನಡ ಸಂಘ ಹಾಗೂ ಭಿವಾಡಿ ಕನ್ನಡ ಸಂಘಗಳಲ್ಲಿ ಸುಮಾರು ಹದಿನೈದರಿಂದ ಇಪ್ಪತ್ತೈದು ವರ್ಷಗಳ ಕಾಲ ಸಕ್ರಿಯವಾಗಿ ಕನ್ನಡದ ಕಾರ್ಯಕ್ರಮ ಮತ್ತು ಇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಇದೀಗ ವೃತ್ತಿಯಿಂದ ಸ್ವಯಂ ನಿವೃತ್ತಿಗೊಂಡು ಸುಮಾರು ಇಪ್ಪತ್ತೈದು ಕುಟುಂಬಗಳು ಈಗ ತಾಯ್ನಾಡಿಗೆ ಮರಳುತ್ತಿದ್ದಾರೆ. ದೆಹಲಿ ಕರ್ನಾಟಕ ಸಂಘದಲ್ಲಿಯೂ ಈ ಎಲ್ಲಾ ಸದಸ್ಯರು ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದುದ್ದಲ್ಲದೆ ನಮ್ಮೊಂದಿಗೆ ತುಂಬಾ ಅನ್ಯೋನ್ಯವಾಗಿದ್ದರು. ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾಗೂ ದೆಹಲಿ ಕರ್ನಾಟಕ ಸಂಘದ ಪರವಾಗಿ ಅಭಿನಂದನೆಗಳು ಮತ್ತು ಅವರ ತಾಯ್ನಾಡಿನ ಹೊಸ ಜೀವನ ಸುಖಮಯವಾಗಿರಲೆಂದು ಆಶಿಸುತ್ತೇನೆ.

*ಸಿ.ಎಂ. ನಾಗರಾಜ*
*ಪ್ರಧಾನ ಕಾರ್ಯದರ್ಶಿ*

## ಶ್ರದ್ಧಾಂಜಲಿ

### ಹಿರಿಯ ಕವಿ ಎನ್.ಎಸ್. ಲಕ್ಷ್ಮೀ ನಾರಾಯಣ ಭಟ್ಟ



ಕನ್ನಡ ಸಾಹಿತ್ಯದ ಅಗ್ರಮಾನ್ಯ ಕವಿ, ಜನಪ್ರಿಯ ಪ್ರಾಧ್ಯಾಪಕ, ಏಟ್ಸ್, ಎಲಿಯಟ್, ಷೇಕ್ಸ್‌ಪಿಯರ್ ಕಾವ್ಯವನ್ನು ಅನನ್ಯವಾಗಿ ಕನ್ನಡಕ್ಕೆ ತಂದ ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರು ದಿನಾಂಕ 06.03.2021 ರಂದು ನಿಧನರಾಗಿದ್ದಾರೆ.

ಭಟ್ಟರು ಭಾವಗೀತೆ, ಸಾಹಿತ್ಯ ವಿಮರ್ಶೆ, ಅನುವಾದ, ನವ್ಯಕವಿತೆ, ಮಕ್ಕಳ ಸಾಹಿತ್ಯ ಹೀಗೆ ಹಲವಾರು ಪ್ರಕಾರಗಳಲ್ಲಿ ಸಾಹಿತ್ಯ ಕೃಷಿ ಮಾಡಿ ವ್ಯಾಪಕ ಮನ್ನಣೆ ಪಡೆದಿದ್ದರು. ಇವರ ನಿಧನದಿಂದ ಕನ್ನಡ ಸಾಹಿತ್ಯ ಕ್ಷೇತ್ರದ ತಾರೆಯೊಂದು ಕಳಚಿದಂತಾಗಿದೆ. ದೆಹಲಿ ಕರ್ನಾಟಕ ಸಂಘದ ಅನೇಕ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅವರು ಭಾಗವಹಿಸಿದ್ದರು.

ಅಗಲಿದ ಹಿರಿಯ ಸಾಹಿತಿ ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.

### ಪದ್ಮಭೂಷಣ ಭತ್ತದ ಮಹಾದೇವಪ್ಪ



ಖ್ಯಾತ ಕೃಷಿ ವಿಜ್ಞಾನಿ, ಪದ್ಮಭೂಷಣ ಡಾ. ಎಂ. ಮಹಾದೇವಪ್ಪ ಅವರು ದಿನಾಂಕ 06.03.2021 ರಂದು ನಿಧನರಾಗಿದ್ದಾರೆ.

ಮಹಾದೇವಪ್ಪ ಅವರು ಕೃಷಿ ವಿಜ್ಞಾನಿಯಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರುವಾಸಿಯಾಗಿದ್ದರು. ಅವರು ಧಾರವಾಡ ಕೃಷಿ ವಿಶ್ವವಿದ್ಯಾಲಯದ ನಾಲ್ಕನೇ ಕುಲಪತಿಯಾಗಿ ಸೇವೆ ಸಲ್ಲಿಸಿದ್ದರು. ಭತ್ತದ ಹೊಸ ಹೊಸ ತಳಿಗಳನ್ನು ಸಂಶೋಧಿಸಿದ್ದರು. ಹೀಗಾಗಿಯೇ ಇವರು ಭತ್ತದ ಮಹಾದೇವಪ್ಪ ಎಂದೇ ಹೆಸರುವಾಸಿಯಾಗಿದ್ದರು. ಇವರ ಸೇವೆಯನ್ನು ಪರಿಗಣಿಸಿದ ಭಾರತ ಸರಕಾರ ಪದ್ಮಶ್ರೀ ಹಾಗೂ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ.

ಇವರು ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿದ್ದು ಸಂಘದೊಡನೆ ಆತ್ಮೀಯ ನಂಟನ್ನು ಹೊಂದಿದ್ದರು.

ಅಗಲಿದ ಹಿರಿಯ ಚೇತನ ಮಹಾದೇವಪ್ಪನವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.

# ಕವಿ ಎಚ್.ಎಸ್. ಶಿವಪ್ರಕಾಶ್ ಮತ್ತು ಹದಿನೈದು ಮಂದಿ ಆಜೀವ ಸದಸ್ಯರಿಗೆ ಬೀಳ್ಕೊಡುಗೆ




ದೆಹಲಿಯಲ್ಲಿ ಕಳೆದ 24 ವರ್ಷಗಳಿಂದ ನೆಲೆಸಿದ್ದ ಕನ್ನಡದ ಹಿರಿಯ ಕವಿ, ನಾಟಕಕಾರ, ಜೆ.ಎನ್.ಯು.ವಿನ ನಿವೃತ್ತ ಪ್ರಾಧ್ಯಾಪಕ ಡಾ. ಎಚ್.ಎಸ್. ಶಿವಪ್ರಕಾಶ್ ಅವರು ಈಚೆಗೆ ತಾಯ್ನಾಡಿಗೆ ಮರಳಿದ್ದಾರೆ. ಅವರೊಂದಿಗೆ ದೆಹಲಿ ಎನ್.ಸಿ.ಆರ್. ಭಾಗವಾದ ಭಿವಾಡಿ ಮತ್ತು ಗುರುಗಾಂವ್ ಪ್ರದೇಶಗಳಲ್ಲಿ ನೆಲೆಸಿದ್ದ ದೆಹಲಿ ಕರ್ನಾಟಕ ಸಂಘದ ಹದಿಮೂರು ಮಂದಿ ಆಜೀವ ಸದಸ್ಯರು ಇತ್ತೀಚೆಗೆ ತಾಯ್ನಾಡಿಗೆ ಮರಳಿದ್ದಾರೆ. ಇವರೆಲ್ಲರನ್ನೂ ದೆಹಲಿ ಕರ್ನಾಟಕ ಸಂಘದಲ್ಲಿ ದಿನಾಂಕ 19.02.2021ರಂದು ನಡೆದ ಸಮಾರಂಭದಲ್ಲಿ ಆತ್ಮೀಯವಾಗಿ ಬೀಳ್ಕೊಡಲಾಯಿತು.

ಈಚೆಗೆ ಧಾರವಾಡದ ದ.ರಾ. ಬೇಂದ್ರೆ ರಾಷ್ಟ್ರೀಯ ಟ್ರಸ್ಟ್‌ನಿಂದ ಅಂಬಿಕಾತನಯದತ್ತ ರಾಷ್ಟ್ರೀಯ ಪ್ರಶಸ್ತಿಯನ್ನೂ ಪಡೆದ ಡಾ. ಎಚ್. ಎಸ್. ಶಿವಪ್ರಕಾಶ್ ಅವರನ್ನು ಅಭಿನಂದಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಶಿವಪ್ರಕಾಶ್ ಅವರು ದೆಹಲಿಯಲ್ಲಿ ರಜತ ವರ್ಷವನ್ನು ಆಚರಿಸುವ ಮುನ್ನವೇ ತಾಯ್ನಾಡಿಗೆ ತೆರಳಬೇಕಾಗಿದೆ. ದೆಹಲಿ ಮತ್ತು ದೆಹಲಿ ಕರ್ನಾಟಕ ಸಂಘದ ನೆನಪುಗಳು ಮಧುರ. ಆರಂಭದಿಂದಲೂ ದೆಹಲಿ ಕರ್ನಾಟಕ ಸಂಘ ನನಗೆ ಆಸರೆಯಾಗಿ ಒದಗಿತ್ತು. ಇಲ್ಲಿನ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ನೆನಪು ಹಸಿರಾಗಿದೆ. ಮಹನೀಯರು ಕಟ್ಟಿ ಬೆಳೆಸಿದ ಈ ಸಂಘ ಇನಷ್ಟು ಎತ್ತರಕ್ಕೆ ಬೆಳೆಯಲಿ ಎಂದು ಹಾರೈಸಿದರು. ಅವರು ಕೇಂದ್ರ ಸಾಹಿತ್ಯ ಅಕಾಡೆಮಿ, ಜೆ.ಎನ್.ಯು. ಮತ್ತು ಜರ್ಮನಿಯ ಟಾಗೋರ್ ಸೆಂಟರ್‌ಗಳಲ್ಲಿ ಸಲ್ಲಿಸಿದ ಸೇವೆಯ ಅನುಭವಗಳನ್ನು ಹಂಚಿಕೊಂಡರು.

ಗುರುಗಾಂವ್ ಮತ್ತು ಭಿವಾಡಿಗಳಲ್ಲಿ ನೆಲೆಸಿ ಅಲ್ಲಿನ ಕನ್ನಡ ಸಂಘ ಸಂಸ್ಥೆಗಳ ಮೂಲಕ ಕನ್ನಡಪರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು, ಇತ್ತೀಚೆಗೆ ತಮ್ಮ ವೃತ್ತಿಗೆ ಸ್ವಯಂ ನಿವೃತ್ತಿ ಪಡೆದು ತಾಯ್ನಾಡಿಗೆ ಮರಳುತ್ತಿರುವ ಶ್ರೀಯುತರಾದ ಸಂದೀಪ್ ಶೆಟ್ಟಿ, ಈಶ್ವರಲಿಂಗ ಅರೇರಾ, ಶಶಿಕಾಂತ್ ಕಳಬಂಡಿ, ರಾಜೇಶ್ ಇ.ವಿ, ಮಂಜುನಾಥ ರಾಮ, ಪುರುಷೋತ್ತಮ, ಪೂರ್ಣಚಂದ್ರ, ಸಂಜಯ್ ಟಿ.ಸಿ., ಸುರೇಶ್ ಎಲ್., ಮಹಾದೇವ್ ಕಜರಗಿ, ಸಂತೋಷ ಶೇರಿ, ರಾಚಣ್ಣ, ರವಿ, ಪರಮೇಶ್ ಎಸ್. ಇವರನ್ನು ಅಭಿನಂದಿಸಿ ಬೀಳ್ಕೊಡಲಾಯಿತು. ಶ್ರೀಯುತ ಬಸವರಾಜ ಶಬಾದಿ, ಖಾದರ್ ಸಾಹೇಬ್ ಮತ್ತು ನಾನುಬಾಲ ಮನೋಜ್ ಕುಮಾರ್ ಅವರೂ ಹುಟ್ಟೂರಿಗೆ ಮರಳಿದ್ದು ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಖಾಸಗಿ ಕಂಪನಿಯಲ್ಲಿ ದುಡಿಯುತ್ತಲೇ ಇವರೆಲ್ಲರೂ ಕನ್ನಡಪರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಅಲ್ಲದೆ ಕನ್ನಡ ಕಲಿಕಾ ಕೇಂದ್ರಗಳನ್ನು ಕೂಡಾ ಆರಂಭಿಸಿ ಯಶಸ್ವಿಯಾಗಿದ್ದರು. ಬೀಳ್ಕೊಡುಗೆಯನ್ನು ಸ್ವೀಕರಿಸಿ ಇವರೆಲ್ಲರೂ ತಮ್ಮ ಅನುಭವಗಳನ್ನು ಹಂಚಿಕೊಂಡರು ಮತ್ತು ದೆಹಲಿ ಕರ್ನಾಟಕ ಸಂಘದೊಂದಿಗಿನ ತಮ್ಮ ಆತ್ಮೀಯ ನೆನಪುಗಳನ್ನು ಮೆಲುಕು ಹಾಕಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಮಾತನಾಡಿ ಕಳೆದ ಎರಡು ದಶಕಗಳಿಂದ ಹೊರನಾಡಿನಲ್ಲಿ ನೆಲೆಸಿ, ರಾಷ್ಟ್ರ ರಾಜಧಾನಿಯಲ್ಲಿ ರಾಯಭಾರಿಗಳಂತೆ ಇದ್ದು ಕನ್ನಡತನವನ್ನು ಮೆರೆದ ಎಲ್ಲರನ್ನು ಅಭಿನಂದಿಸಿದರು. ತಾಯ್ನಾಡಿಗೆ ಮರಳಿದರೂ ದೆಹಲಿ ಕರ್ನಾಟಕ ಸಂಘದೊಂದಿಗಿನ ಸಂಬಂಧ, ಸಂಪರ್ಕ ಸದಾ ಕಾಲ ಇರಲಿ. ಸಂಘದ ಬೆಳವಣಿಗೆಗೆ ಮುಂದೆಯೂ ತಮ್ಮ ಸಹಕಾರ ಇರಲಿ. ತಮ್ಮ ಭವಿಷ್ಯ ಉಜ್ವಲವಾಗಿರಲೆಂದು ಹಾರೈಸಿದರು.

ಇದೇ ಸಂದರ್ಭದಲ್ಲಿ ಡಾ. ಹೆಗಡೆ ಅವರು ಹಿರಿಯ ಸಾಹಿತಿ ಡಾ. ಎಚ್.ಎಸ್. ಶಿವಪ್ರಕಾಶ್ ಅವರು ದೆಹಲಿಯಲ್ಲಿದ್ದುಕೊಂಡು ಕನ್ನಡ ಸಾರಸ್ವತಲೋಕಕ್ಕೆ ನೀಡಿದ ಕೊಡುಗೆಗಳನ್ನು ಸ್ಮರಿಸಿಕೊಂಡರು. ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಶಿವಪ್ರಕಾಶ್ ಅವರು ಸಲ್ಲಿಸುತ್ತಿರುವ ಸೇವೆಯಿಂದ ಮತ್ತು ಸಾಧನೆಯಿಂದ ಹೊರನಾಡ ಕನ್ನಡಿಗರಾಗಿ ನಾವು ಹೆಮ್ಮೆಪಡುವಂತಾಗಿದೆ ಎಂದು ಅವರು ಸಂತಸ ವ್ಯಕ್ತಪಡಿಸಿದರು. ಡಾ. ಹೆಗಡೆ ಅವರು ಶಿವಪ್ರಕಾಶ್ ಅವರಿಗೆ ಶುಭಾಶಯಗಳನ್ನು ಹೇಳಿದರು.

ಕೋಶಾಧಿಕಾರಿ ಶ್ರೀಮತಿ ಆಶಾಲತಾ ಎಂ. ಅವರು ಕವಿ ಎಚ್.ಎಸ್. ಶಿವಪ್ರಕಾಶ್ ಅವರ ನಾಟಕದ ರಿಹರ್ಸಲ್‌ನಲ್ಲಿ ಭಾಗವಹಿಸಿದ ಸಂದರ್ಭವನ್ನು ನೆನಪಿಸಿಕೊಂಡರು.

ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಸ್ವಾಗತಿಸಿದರು. ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್, ಜಂಟಿ ಕಾರ್ಯದರ್ಶಿ ಶ್ರೀಮತಿ ಪೂಜಾ ರಾವ್, ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ. ಎಂ.ಎಸ್. ಶಶಿಕುಮಾರ್, ಶ್ರೀನಾಥ್ ಎನ್.ಆರ್., ಶ್ರೀಮತಿ ಸವಿತಾ ನೆಲ್ಲಿ, ಶಿವಪ್ಪ ಎಂ., ಸಂತೋಷ ಜೆ., ಮತ್ತು ಟಿ.ಎಂ. ಮೈಲಾರಪ್ಪ ಉಪಸ್ಥಿತರಿದ್ದರು.

*ಶ್ರೀನಾಥ್ ಎನ್.ಆರ್*

# ಸಂಘದ ಆಜೀವ ಸದಸ್ಯರ ಬೀಳ್ಕೊಡುಗೆ ಕಾರ್ಯಕ್ರಮದ ಆತ್ಮೀಯ ಕ್ಷಣಗಳು






































## ನುಡಿ ನಮನ

# ಶ್ರೀಧರ ಭಂಡಾರಿಯವರಿಗೆ ನಮನಗಳು (1945-2021)

ತೆಂಕುತಿಟ್ಟು ಯಕ್ಷಗಾನದ ಪ್ರಸಿದ್ಧ ಕಲಾವಿದರಾದ ಪುತ್ತೂರು ಶ್ರೀಧರ ಭಂಡಾರಿಯವರ ನಿಧನದ ವಾರ್ತೆ ರಾತ್ರಿ ತಲುಪುತ್ತಿದ್ದಂತೆ ತುಂಬ ಖಿನ್ನನಾದೆ ಅವರು ಬಹುದೊಡ್ಡ ಕಲಾವಿದರೂ ಹೌದು, ನನ್ನ ನಿಡುಗಾಲದ ಆಪ್ತ ಸ್ನೇಹಿತರೂ ಹೌದು. ನಾನು ಬಹಳ ಚಿಕ್ಕವನಿದ್ದಾಗ ಕ್ರಿಶ್ಚಿಯನ್ ಬಾಬು ಅವರ ಪುಂಡು ವೇಷ (ಪಕಡಿ ವೇಷ) ನೋಡಿ ದಂಗಾಗುತ್ತಿದ್ದೆ. ಅತ್ಯಂತ ವೇಗದಿಂದ ರಂಗಪ್ರವೇಶ ಮಾಡುತ್ತಿದ್ದ ಅವರು, ಅದಕ್ಕಿಂತಲೂ ವೇಗವಾಗಿ ಧೀಂಗಿಣ ಹೊಡೆವಾಗ ಚೆಂಡೆವಾದಕರಿಗೂ ಅವರಿಗೂ ಸ್ಪರ್ಧೆ ಏರ್ಪಡುತ್ತಿತ್ತು. ಮಾಣಂಗಾಯಿ ಕೃಷ್ಣ ಭಟ್, ಮತ್ತು ಹೊಸಹಿತ್ಲು ಮಹಾಲಿಂಗ ಭಟ್ಟರು ಪುಂಡು ವೇಷಕ್ಕೆ ಅದ್ಭುತವಾಗಿ ಕುಣಿಯುವುದರೊಂದಿಗೆ, ಅಷ್ಟೇ ಸಮರ್ಥವಾಗಿ ಅರ್ಥವನ್ನೂ ಹೇಳುತ್ತಿದ್ದರು. ಇವೆಲ್ಲ ಮಾನವ ಮಾತ್ರರಿಗೆ ಹೇಗೆ ಸಾಧ್ಯ? ನಮ್ಮ ದೇಹದಲ್ಲಿ ಅಷ್ಟೊಂದು ಶಕ್ತಿ ಇದೆಯಾ? ಎಂಬ ಕುತೂಹಲ ನನ್ನಲ್ಲಿ ಇನ್ನೂ ಉಳಿದಿದೆ.

ಈ ಪರಂಪರೆಯನ್ನು ಸಮರ್ಥವಾಗಿ ಮುಂದುವರಿಸಿದ ಕೀರ್ತಿ ಪುತ್ತೂರು ಶ್ರೀಧರ ಭಂಡಾರಿಯವರದು. ಅವರ ತಂದೆ ಪುತ್ತೂರು ಶೀನಪ್ಪ ಭಂಡಾರಿಗಳೂ ನನಗೆ ಪರಿಚಯ, ಅವರೂ ದೊಡ್ಡ ಕಲಾವಿದರೇ ಹೌದು. ಯಕ್ಷಗಾನ ಮೇಳ ಕಟ್ಟಲು ಹೋಗಿ ಕಷ್ಟ ಪಟ್ಟವರು.ಗೆಳೆಯ ಚಂದ್ರಶೇಖರ ಮಂಡೆಕೋಲು ಅವರ ಬಗ್ಗೆ ಒಳ್ಳೆಯ ಪುಸ್ತಕವೊಂದನ್ನು ಬರೆದಿದ್ದಾರೆ. ಅಪ್ಪನ ಹಾಗೇ ಶ್ರೀಧರರೂ ಮೇಳ ಕಟ್ಟಲು ಹೊರಟು ತೊಂದರೆಗೊಳಗಾದವರೇ. ಅವರ ಪುತ್ತೂರು ಮೇಳದ ಹಲವು ಆಟಗಳನ್ನು ಸುಳ್ಯ ಪರಿಸರದಲ್ಲಿ ನಾನು ನೋಡಿದ್ದೇನೆ.

ಶ್ರೀಧರ ಭಂಡಾರಿಯವರಿಗೆ ಯಕ್ಷಗಾನ ಅಭಿಮಾನಿಗಳು ಕೊಟ್ಟ 'ಸಿಡಿಲ ಮರಿ' ಎಂಬ ಬಿರುದು ಅನ್ವರ್ಥಕವಾದುದು. ಮಾತು ಮತ್ತು ಕುಣಿತಗಳ ನಡುವೆ ಸಾಮರಸ್ಯ ಸಾಧಿಸಿದ ದೊಡ್ಡ ಕಲಾವಿದರವರು. 70 ಹರೆಯದಲ್ಲೂ ದೇಹದ ತಾರುಣ್ಯವನ್ನು ಉಳಿಸಿಕೊಂಡು ಅಭಿಮನ್ಯು ಪಾತ್ರ ಮಾಡಿದವರು.

1993ರಲ್ಲಿ ಜಪಾನಿನಲ್ಲಿ ಯಕ್ಷಗಾನ ಪ್ರದರ್ಶಿಸುವ ಸಂದರ್ಭ ಬಂದಾಗ ನಾನು ಕಿರೀಟ ವೇಷಕ್ಕೆ ಸೂರಿಕುಮೇರ್ ಗೋವಿಂದ ಭಟ್ಟರನ್ನೂ, ಪುಂಡು ವೇಷಕ್ಕೆ ಶ್ರೀಧರ ಭಂಡಾರಿಯವರನ್ನೂ ಭಾಗವತಿಗೆ ಪುತ್ತಿಗೆ ರಘುರಾಮ ಹೊಳ್ಳರನ್ನೂ ಆರಿಸಿಕೊಂಡಿದ್ದೆ. ಚೆಂಡೆಗೆ ಪದ್ಯಾಣ ಶಂಕರನಾರಾಯಣ ಭಟ್ಟರಿದ್ದರು. ಶ್ರೀಧರ ಭಂಡಾರಿಯವರು ವೀರ ಅಭಿಮನ್ಯು ಪ್ರಸಂಗದಲ್ಲಿ ಅಭಿಮನ್ಯುವನ್ನೂ, ಇಂದ್ರಜಿತು ಕಾಳಗದಲ್ಲಿ ಮೈ ಬಿಟ್ಟ ಲಕ್ಷ್ಮಣನನ್ನೂ, ನರಕಾಸುರ ವಧೆಯಲ್ಲಿ ಕೃಷ್ಣನನ್ನೂ ಮಾಡಿದ್ದರು. ಟೋಕಿಯೋದ



ನ್ಯಾಶನಲ್ ಥಿಯೇಟರ್ ನಲ್ಲಿ ಭಂಡಾರಿಯವರ ಅಭಿಮನ್ಯುವಿಗೆ ಜಪಾನೀ ಪ್ರೇಕ್ಷಕರು ಚಪ್ಪಾಳೆ ತಟ್ಟಿ ಎದ್ದು ನಿಂತು ಅಪೂರ್ವ ಗೌರವ ಸಲ್ಲಿಸಿದರು. ಪ್ರಸಂಗ ಕೊನೆಯಾದಾಗ ಚೌಕಿಗೆ ನುಗ್ಗಿದ ಅವರ ಅಭಿಮಾನಿಗಳ ಹೊಗಳಿಕೆಗೆ ಭಂಡಾರಿಯವರು ನಾಚಿ ನೀರಾಗಿದ್ದರು.

ವಿದೇಶಕ್ಕೆ ಹೋಗುವಾಗ ತಂಡದ ಎಲ್ಲರೂ ಎಲ್ಲ ಬಗೆಯ ಕೆಲಸಗಳನ್ನೂ ಮಾಡಬೇಕಾಗುತ್ತದೆ. ಅನೇಕ ಕಲಾವಿದರಿಗೆ ಇದು ಸುಲಭವಾಗಿ ಅರ್ಥವಾಗುವುದಿಲ್ಲ, ಅವರಿಗೆ ಹೇಳುವುದೂ ಕಷ್ಟವೇ. ಆದರೆ ಶ್ರೀಧರಣ್ಣನಿಗೆ ಇವೆಲ್ಲ ಸುಲಭವಾಗಿ ತಿಳಿಯುತ್ತಿತ್ತು. ಚಹಾ ಕಪ್ ಎತ್ತಿಡುವುದರಿಂದ ತೊಡಗಿ, ಸಾಮಾನು ಹೊರುವಲ್ಲಿವರೆಗೆ ಎಲ್ಲ ಬಗೆಯ ಕೆಲಸಗಳನ್ನೂ ಅವರು ಸಂಕೋಚವಿಲ್ಲದೆ ಮಾಡುತ್ತಿದ್ದರು.

1963ರಲ್ಲಿ ಮೇಳದ ಕಲಾವಿದರಾಗಿ ಸೇರಿದ ಭಂಡಾರಿಯವರು ಕಳೆದ 58 ವರ್ಷಗಳಲ್ಲಿ ಹಾಕಿದ ಧೀಂಗಣಗಳ ಲೆಕ್ಕ ಇಟ್ಟವರಿಲ್ಲ. ಆದರೆ ಆ ಕುಣಿತಗಳು ಅವರ ಮೊಣಕಾಲ ಗಂಟನ್ನೇ ಸವೆಯಿಸಿ ಕಷ್ಟ ಕೊಟ್ಟಿತು. ಅವರ ಅಭಿಮನ್ಯು, ಕೃಷ್ಣ, ಬಭ್ರುವಾಹನ, ಕುಶ, ಪರಶುರಾಮ, ಅಶ್ವತ್ಥಾಮ ಮೊದಲಾದ ವೇಷಗಳು ಯಕ್ಷಗಾನ ಲೋಕದಲ್ಲಿ ಶಾಶ್ವತ ನೆನಪಾಗಿ ಉಳಿಯಲಿವೆ. ನಾನಂತೂ ಅವರ 'ತಿತ್ತಿತ್ಥೈ' ನೋಡಲೆಂದೇ ರಾತ್ರಿಯಿಡೀ ಕುಳ್ಳಿರುತ್ತಿದ್ದೆ. ಅದು ಪಡ್ರೆ ಚಂದು ಅವರ ಹತ್ತಿರ ನನ್ನನ್ನು ಕರೆದೊಯ್ಯುತ್ತಿತ್ತು.

ಗೆಳೆಯ ಕಟೀಲು ಸಿತ್ಲ ರಂಗನಾಥ ರಾಯರು ಭಂಡಾರಿಯವರ ಬಗ್ಗೆ ಒಳ್ಳೆಯ ದಾಖಲಾತಿ ಮಾಡಿದ್ದಾರೆ. ವಿದ್ಯಾ ಕೋಳ್ಯೂರೂ ಅವರಲ್ಲಿಯೂ ಒಳ್ಳೆಯ ಸಂಗ್ರಹವಿದೆ. ಇವು ಮುಂದಿನ ತಲೆಮಾರಿಗೆ ಮಾರ್ಗದರ್ಶನ ಮಾಡಲಿವೆ.

ಶ್ರೀಧರಣ್ಣ ಹೋಗಿ ಬನ್ನಿ, ಮತ್ತೆಲ್ಲಾದರೂ ಭೇಟಿ ಆಗೋಣ, ಯಕ್ಷಗಾನದ ಕಷ್ಟ ಸುಖಗಳ ಬಗ್ಗೆ ಮಾತಾಡೋಣ.

***ಡಾ. ಪುರುಷೋತ್ತಮ ಬಿಳಿಮಲೆ***

# ಮಾಜಿ ರಾಜ್ಯಪಾಲ ಡಾ. ಎಂ. ರಾಮಾ ಜೋಯಿಸ್ ವಿಧಿವಶ

ನಿವೃತ ನ್ಯಾಯಮೂರ್ತಿ ಶಿವಮೊಗ್ಗ ಜಿಲ್ಲೆಯ ಮಂಡಗದ್ದೆ ಡಾ. ಎಂ. ರಾಮಾ ಜೋಯಿಸ್ ದಿನಾಂಕ 16.02.2021 ರಂದು ನಿಧನರಾಗಿದ್ದಾರೆ.

ಡಾ. ರಾಮಾ ಜೋಯಿಸ್ ಅವರು ರಾಜ್ಯಸಭಾ ಸದಸ್ಯರಾಗಿ, ಬಿಹಾರ ಮತ್ತು ಜಾರ್ಖಂಡ ರಾಜ್ಯದ ರಾಜ್ಯಪಾಲರಾಗಿ, ಪಂಜಾಬ್ ಮತ್ತು ಹರಿಯಾಣ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿದ್ದರು. ಜೋಯಿಸ್ ಅವರು ಲೀಗಲ್ ಆ್ಯಂಡ್ ಕಾನ್ಸ್ಟಿಟ್ಯೂಶನಲ್ ಹಿಸ್ಟರಿ ಆಫ್ ಇಂಡಿಯಾ, ರಾಜಧರ್ಮ ವಿತ್ ಲೆಸನ್ಸ್ ಆನ್ ರಾಜನೀತಿ ಮೊದಲಾದ ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ.

ಸರಳ ಹಾಗೂ ಮೃದು ಭಾಷಿಯಾದ ಇವರು ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮವೊಂದರಲ್ಲಿ ಅತಿಥಿಯಾಗಿ ಭಾಗವಹಿಸಿದ್ದರು.

ಅಗಲಿದ ಹಿರಿಯ ಚೇತನ ಡಾ. ಎಂ. ರಾಮಾ ಜೋಯಿಸ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.



## ಅಗಲಿದ ರಾಮಾ ಜೋಯಿಸ್ ಅವರಿಗೆ ನುಡಿ ನಮನ




ಈಚೆಗೆ ಅಗಲಿದ ನಿವೃತ ನ್ಯಾಯಮೂರ್ತಿ ಡಾ. ಎಂ. ರಾಮಾ ಜೋಯಿಸ್ ಅವರಿಗೆ ದಿನಾಂಕ 19.02.2021 ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಡಾ. ಎಂ. ರಾಮಾ ಜೋಯಿಸ್ ಅವರು ನ್ಯಾಯಾಂಗ ಕ್ಷೇತ್ರಕ್ಕೆ ಸಲ್ಲಿಸಿದ ಕೊಡುಗೆಗಳನ್ನು ಸ್ಮರಿಸಿಕೊಂಡರು. ವೈಯಕ್ತಿಕವಾಗಿ ಅವರನ್ನು ಭೇಟಿ ಮಾಡಿದ ಮತ್ತು ತಮ್ಮ ವೃತ್ತಿಗೆ ಸಂಬಂಧಿಸಿದಂತೆ ಅವರ ಮಾರ್ಗದರ್ಶನ, ಸಲಹೆಗಳನ್ನು ಪಡೆದ ಸಂದರ್ಭಗಳನ್ನು ಮೆಲುಕು ಹಾಕಿದರು. ಡಾ. ಹೆಗಡೆ ಅವರು ರಾಮಾ ಜೋಯಿಸರು ಸಂಘದ ಕಾರ್ಯಕ್ರಮದಲ್ಲಿ ಈ ಹಿಂದೆ ಭಾಗವಹಿಸಿದ್ದನ್ನು ನೆನಪಿಸಿಕೊಂಡರು.

ಉಪಾಧ್ಯಕ್ಷ ಡಾ. ಅವನೀಂದ್ರನಾಥ್ ರಾವ್ ಮಾತನಾಡಿ ತಾವು ರಾಮಾ ಜೋಯಿಸರಿಂದ ಬೆಂಗಳೂರಿನ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿದ್ದನ್ನು ಸ್ಮರಿಸಿಕೊಂಡರು. ಅವನೀಂದ್ರನಾಥ್ ಅವರು ಸಂಪಾದಕರಾಗಿರುವ ಸಂಘದ ಮಾಜಿ ಅಧ್ಯಕ್ಷ ದಿ. ಐ. ರಾಮಮೋಹನ ರಾವ್ ಅವರ 'ನಾನು ಕಂಡ ನನ್ನ ದೇಶ' ಕೃತಿಯನ್ನು ರಾಮಾ ಜೋಯಿಸ್ ಅಂದು ಬಿಡುಗಡೆಗೊಳಿಸಿದ್ದರು. ಆ ದಿನ ಸಮಾರಂಭದಲ್ಲಿ ಭಾಗವಹಿಸಿದ ಹಿರಿಯ ಸಾಹಿತಿ ದಿ. ಡಾ. ಎಲ್.ಎಸ್. ಶೇಷಗಿರಿ ರಾವ್, ಪ್ರೊ. ಜಿ. ವೆಂಕಟಸುಬ್ಬಯ್ಯ ಅವರ ಜೊತೆಗಿನ ಮಾತುಕತೆಯ ಕ್ಷಣಗಳನ್ನು ಅವನೀಂದ್ರನಾಥ್ ನೆನಪಿಸಿಕೊಂಡರು.

ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು, ಸದಸ್ಯರು ಮತ್ತು ಆಜೀವ ಸದಸ್ಯರು ಪಾಲ್ಗೊಂಡು ಅಗಲಿದ ಹಿರಿಯ ಚೇತನ ರಾಮಾ ಜೋಯಿಸರಿಗೆ ಮೌನ ಪ್ರಾರ್ಥನೆಯನ್ನು ಸಲ್ಲಿಸುವ ಮೂಲಕ ಗೌರವ ಸೂಚಿಸಿದರು.


# ಭಾವಕವಿ ವೆಂಕಟೇಶಮೂರ್ತಿಯವರ 'ಬುದ್ಧಚರಣ'

**ಕೃತಿ ಸಮೀಕ್ಷೆ**

ಕನ್ನಡದ ಸುಪ್ರಸಿದ್ಧ ಕವಿ ಮತ್ತು ನಾಟಕಕಾರ ಡಾ. ಎಚ್.ಎಸ್. ವೆಂಕಟೇಶಮೂರ್ತಿಯವರ (ಎಚ್.ಎಸ್.ವಿ. ಯೆಂದೆ ಚಿರಪರಿಚಿತರು) ಕಾವ್ಯಪ್ರಪಂಚ ಸಾಗರದಂತೆ ವಿಸ್ತಾರವಾದದ್ದು. ಅವರು ಕಳೆದ ಫೆಬ್ರವರಿ 2020 ರಲ್ಲಿ ಕಲುಬುರ್ಗಿಯಲ್ಲಿ ನಡೆದ 85 ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯನ್ನು ಅಲಂಕರಿಸಿದವರು. ವೈಯಕ್ತಿಕ ನೆಲೆಯಲ್ಲಿ ಅವರು ನನ್ನ ಗುರುಗಳು. ವಾಣಿಜ್ಯ ಶಾಸ್ತ್ರದ ವಿಧ್ಯಾರ್ಥಿಗಳಾದಂತಹ (ನಂತರದಲ್ಲಿ ಕಾನೂನು ಶಾಸ್ತ್ರ) ನಮ್ಮಂತವರನ್ನು ಕನ್ನಡ ಸಾಹಿತ್ಯದತ್ತ, ಬರವಣಿಗೆಯತ್ತ ಸೆಳೆದ ಮಾಂತ್ರಿಕರು ಅವರು. ಎಲ್ಲದಕ್ಕೂ ಮಿಗಿಲಾಗಿ ಕಳೆದ ನಾಲ್ಕು ದಶಕಗಳಿಗೂ ಮೀರಿ ನನ್ನ ಸಾಹಿತ್ಯ ಪ್ರಪಂಚದ ಮತ್ತು ಬರವಣಿಗೆಯ ನಿರಂತರ ಭಾಗವಾಗಿದ್ದವರು. ಅವರ ಬದುಕು ಮತ್ತು ಬರವಣಿಗೆಯನ್ನು ಒಟ್ಟಾರೆಯಾಗಿ ಹತ್ತಿರದಿಂದ ಕಾಣುವ ಸುಯೋಗ ನನ್ನದಾಗಿತ್ತು. ಹೀಗಾಗಿ ಇತ್ತೀಚೆಗೆ ಬಿಡುಗಡೆಯಾದ ಅವರ 'ಬುದ್ಧಚರಣ' ಕೃತಿ ನಮಗೆಲ್ಲರಿಗೂ ಅವರು ಏರಿದ ಸಾಹಿತ್ಯ ಸಾಧನೆಯ ಮೆಟ್ಟಿಲುಗಳಲ್ಲಿ ಅಗ್ರಮಾನ್ಯವಾದದ್ದು. ಕಳೆದ ಎರಡು ದಶಕಗಳಿಂದ ಅವರನ್ನು ಕಾಡಿದ ವಸ್ತು ಇದೆಂಬುದನ್ನು ನಾನು ಬಲ್ಲೆ. ಅವರ ಮನದಲ್ಲಿ ಬೋದಿಸತ್ವ ಹೊಕ್ಕ ಕಾಲದಲ್ಲಿ ಅವರು ತಮ್ಮ ಬಾಳಸಂಗಾತಿ ಮತ್ತು ನಮಗೆಲ್ಲ ಅತ್ಯಂತ ಆದರಣೀಯ ಅಮ್ಮನಂತಿದ್ದ ರಾಜಲಕ್ಷ್ಮಿಯವರನ್ನು ಕಳೆದುಕೊಂಡರು. ಅವರ ಇಚ್ಛೆಯಂತೆ ಈ ಕಾವ್ಯದರ್ಶನವನ್ನು ಅವರು ತಮ್ಮ 'ಇಷ್ಟಪದಿ' ರಾಜಲಕ್ಷ್ಮಿಯವರಿಗೆ ಅರ್ಪಿಸಿದ್ದಾರೆ. ಅತ್ಯಂತ ಸುಂದರವಾಗಿ ಅಂಕಿತ ಪ್ರಕಾಶನದವರಿಂದ ಮೂಡಿ ಬಂದ ಈ ಪುಸ್ತಕದ ಮೊದಲ ಪುಟದಲ್ಲೆ ಅವರು ತಮ್ಮ ಈ ಕೃತಿಯನ್ನು ಕಾವ್ಯದ ಸೆಲೆಯಲ್ಲಿ ಸಮರ್ಪಿಸಿದ ರೀತಿ ಅನನ್ಯವಾದದ್ದು. "ಅಷ್ಟಪದಿಯೇ ಇಷ್ಟಪದಿಯಾಗಿ ಮೈತಳೆದ ಬುದ್ಧಚರಣವ ನಿನ್ನ ಮುಡಿಯ ಮೇಲಿಡುವೆ ಮನದನ್ನೆ, ಒಪ್ಪಿಕೊ...ಲೋಕನಶ್ವರತೆ ನನ್ನನುಭವಕೆ ತಂದವಳೆ, ಬಿಸಿಲುಂಡು, ನೆರಳ ಸೆರಗಿಲ್ಲಿಯೇ ತೊರೆದು, ಹೇಳೀ ವಿದಾಯ ಮುಂದೆ ತೆರೆಳಿದ ತೊರೆಯೆ...ಚರಣವಳದರು, ಚರಿತೆ ಉಳಿಸಿ ಹೋದವಳಿಗೆ". ಇವೆಲ್ಲದರ ಬಗ್ಗೆ ವಿಸ್ತಾರವಾಗಿ ಅವರು ಪುಸ್ತಕದ ಮುನ್ನುಡಿಯಲ್ಲಿ ಬರೆದಿದ್ದಾರೆ. ಈ ಪುಸ್ತಕವನ್ನು ದೆಹಲಿ ಕನ್ನಡಿಗರೆಲ್ಲರಿಗೂ ಪರಿಚಯ ಮಾಡಿಕೊಡುವ ಪ್ರಯತ್ನ ಈ ಪುಟ್ಟ ಲೇಖನದ್ದು. ಈ ಕೃತಿಯ ಪ್ರತಿಗಳನ್ನು ತಮ್ಮ ಹಸ್ತಾಕ್ಷರದ ಜೊತೆಗೆ ಎಚ್. ಎಸ್.ವಿ.ಯವರು ದೆಹಲಿ ಕರ್ನಾಟಕ ಸಂಘಕ್ಕೆ ಪ್ರೀತಿಯಿಂದ ಕಳಿಸಿಕೊಟ್ಟಿದ್ದಾರೆ. ಅದಲ್ಲದೆ ಹಲವಾರು ಬಾರಿ ಅವರು ದೆಹಲಿ ಕರ್ನಾಟಕ ಸಂಘಕ್ಕೆ (ಕೇಂದ್ರ ಸಾಹಿತ್ಯ ಅಕೆಡೆಮಿ ಪ್ರಶಸ್ತಿ ಸ್ವೀಕರಿಸಲು, ರಾಷ್ಟ್ರಿಯ ನಾಟಕ ಶಾಲೆ ಕಾರ್ಯಕ್ರಮಗಳಿಗಾಗಿ, ಸಂಘದಲ್ಲಿ ನಡೆದ ಬೇಂದ್ರೆ ಟ್ರಸ್ಟ್ ಕಾರ್ಯಕ್ರಮಗಳಿಗಾಗಿ) ಅಥಿತಿಗಳಾಗಿ ಬಂದಿರುವುದು ನಮ್ಮೆಲ್ಲರ ಸುಯೋಗ.

ಕನ್ನಡ ಸಾಹಿತ್ಯದಲ್ಲಿ ಬುದ್ಧನ ಬದುಕಿನ ಕಥಾಹಂದರ ವಿವಿಧ ರೂಪಗಳಲ್ಲಿ ಮೂಡಿ ಬಂದಿದೆ. ತಮ್ಮ ಮುನ್ನುಡಿಯಲ್ಲಿ ಬುದ್ಧನ ಕುರಿತಾಗಿ ಕನ್ನಡದಲ್ಲಿ ಬಂದ ಎಲ್ಲ ಬರವಣಿಗೆಗಳ ಕುರಿತಾಗಿ ಅವರು ಬರೆದಿದ್ದಾರೆ. ಗೌತಮ ಬುದ್ಧನ ಬದುಕಿನ ಕಥೆಯನ್ನು ಎಚ್.ಎಸ್.ವಿ. ಯವರು ಎಂಟು ಖಾಂಡಗಳಲ್ಲಿ ಲಲಿತ ಛಂದೋಲಯದಲ್ಲಿ ಬರೆದಿದ್ದಾರೆ. ಆರಂಭಕಾಂಡ ಕವಿ ಎಚ್. ಎಸ್.ವಿ. ಯವರ ಕಾವ್ಯದ ಮುಖಾಮುಖಿ ಮತ್ತು ಮನಸ್ಥಿತಿಯೊಂದಿಗೆ ಪ್ರಾರಂಭವಾಗುತ್ತದೆ. ಹಾಗೆ ನೋಡಿದರೆ ಅವರ ಈ ಬುದ್ಧಚರಣ ಅವರು ಕಾಣುವ ಮತ್ತು ಕಟ್ಟುವ ಮನಸ್ಥಿತಿಯ ಕುರಿತಾಗಿಯೆ ಎಂಬುದನ್ನು ಸ್ಪಷ್ಟವಾಗಿ ಹೇಳಬಹುದು. 'ಬರುವುದೆಲ್ಲ ಬರಲಿ, ಹೋಗಲಿ ಹರಿದು. ಇರುವೆ ನಾನಿರುವಂತೆ. ಇರಲಿ ಸಮಶ್ರುತಿ. ಸ್ವಸ್ಥ ಚಿತ್ತ. ನೆಲೆಸಿರಲೆದೆಯಲ್ಲಿ'. ಬುದ್ಧ ಆದದ್ದು, ಬುದ್ಧನಾಗಬೇಕಾದ್ದು...ಇವೆಲ್ಲವೂ ಪೂರ್ವಕಾಂಡದಲ್ಲಿವೆ. 'ಇದ್ದಕಿದ್ದಂತಾದವನೇ ಬುದ್ಧ' ಮತ್ತು ಅದಕ್ಕಾದ ಪೂರ್ವ ಸಿದ್ಧತೆಗಳೇನು? ಎಂಬ ಪ್ರಶ್ನೆಗೆ ನೂರಾರು ಕಥಾನಕದ ಕವಲುಗಳು ಮತ್ತು 'ಸಿದ್ಧರಾಗಿರಿ ಈಗ ಸಮ್ಮಾಸಂಬುದ್ಧನಾಗಲು'. ನಂತರದ ಮಧ್ಯಕಾಂಡದಲ್ಲಿ ಲುಂಬಿನೀವನದಲ್ಲಿ ಬುದ್ಧ ಜನಿಸುವತನಕದ ಕಥೆಯಿದೆ. 'ಬಗೆಹರಿಸಲೆಂದೆ ಬಂದವನು ಭಗವಾನ್ ಬುದ್ಧ! ಮುಂದೆ ಈ ಕಂದ ಆಗುವನು ಸಮ್ಮಾಸಂಬುದ್ಧ' ತಾಯಿಯನ್ನು ಕಳೆದುಕೊಂಡು ಗೌತಮಿಯ ಮಡಿಲಲ್ಲಿ ಬೆಳೆದವನು...ಬಾಲಕ ಸ್ಥಿತಿಯಲ್ಲಿ ಅವನು 'ಧ್ಯಾನಸ್ಥಿತಿಯಲದ್ದುವನು'. ಇದನ್ನೆಲ್ಲ ಕಂಡು ಪರಿತಪಿಸುವ ತಾಯಿ ಗೌತಮಿ. ಬಯಸಿದ ಎಲ್ಲ ಭೋಗದ ಐಷಾರಾಮಗಳು ಅವನ ಬಳಿಯಿದ್ದರೂ ಮನವ ಬಿಡದ ವಿಷಾದ... "ಬಿದ್ದ ಎಲೆಗಳನೆತ್ತಬಹುದು ಕಾವಲ ಮಂದಿ. ಬೋಳು ಮರವನೆತ್ತಬಹುದೆ ಉಪವನದಿಂದ"...ಇವೆಲ್ಲ ಅವನ ಕಾಡುವ ಪ್ರಶ್ನೆಗಳು; ಅವನ ಏಕಾಂತಕ್ಕೆ ಲೋಕಾಂತದಾವರಣ. ಅತ್ತ ಮಳೆಯಾಗದೆ ಬತ್ತತೊಡಗಿದ ನದಿ ನೀರಿಗಾಗಿ ರಾಜ್ಯಗಳ ನಡುವೆ ಮನಸ್ತಾಪ...ಯುದ್ಧದ ಪ್ರಸ್ತಾಪಗಳು... ತಯಾರಿಗಳು...ಹೊರಗೆ ಚಾಚುವ ಕೊಳ್ಳಿ. ಒಳಗೆ ಒಳಗುದಿ ಎಸರು...ಎಣ್ಣೆ ತೀರಿದ ಮೇಲೆ ಪ್ರತಿಯೊಂದು ದೀಪವೂ ನಂದಲಿಕ್ಕೇಬೇಕು. ಕೊನೆಗೆ 'ಇರುಳು ಜಗವೆಲ್ಲ ಮಲಗಿರುವ ಹೊತ್ತು ಎದ್ದಿದ್ದೇನೆ ನಿಷ್ಕ್ರಮಣ ವಿಧಿಗೆ!'

ಉತ್ತರಕಾಂಡದಲ್ಲಿ ಸಿದ್ಧಾರ್ಥ ನಿಷ್ಕ್ರಮಣದ ನಂತರ ನಡೆಸುವ 'ಹುಡುಕಾಟ'ದ ದರ್ಶನಗಳಿವೆ. ಎಲ್ಲೆಲ್ಲ ಹೋದನವನು? ಏನೆಲ್ಲ ಮಾಡಿದನು? ಹಾದುಹೋಗುವ ನೆನಪುಗಳನ್ನೆಲ್ಲ ಕಟ್ಟಿಟ್ಟನೆ? 'ಬೇಡವೆಂದರು ಬಿಡದೆ ಕಾಡುವುದು ಕಳೆದದ್ದು'. ನಂತರದ ಪ್ರವರ್ತನ ಕಾಂಡದಲ್ಲಿ ಭಗವಾನ್ ಬುದ್ಧ ಕೇಳಿದ್ದು, "ನಿರ್ವಾಣ ಪಡೆಯಬೇಕೆ ಭಿಕ್ಕುಗಳೇ?...ಮಧ್ಯಮಮಾರ್ಗದರ್ಶವನು ಗ್ರಹಿಸಿರಿ" ಅತಿಗಳನ್ನು ತ್ಯಜಿಸಿ ನಡೆಯುವ ಮಾರ್ಗವದು. ಇವೆಲ್ಲವನ್ನೂ ಬೋದಿಸುತ್ತ ಭಗವಾನ್ ಬುದ್ಧ ಮತ್ತೆ ಕಪಿಲವಸ್ತುವಿಗೆ ಬಂದಾಗ ತನ್ನ ಮಡದಿ ಯಶೋಧರೆಯೊಂದಿಗೆ ನಡೆಸುವ ಮುಖಾಮುಖಿ ಮತ್ತು ಕಾವ್ಯರೂಪದಲ್ಲಿ ಇಳಿಸಿದ ಸಂವಾದ ಬದುಕಿನ ವೈರುದ್ಯಗಳನ್ನು ಹಿಡಿದಿಡುವ ಪರಿ ವಿಶಿಷ್ಟವಾದದ್ದು. ಭಗವಾನ್ ಬುದ್ಧ ತನ್ನ ಮಿತಿಗಳನ್ನು ಒಪ್ಪಿಕೊಳ್ಳುತ್ತ ಹೇಳುವುದು "ಬೆಳಕನರಸುತ ನಾನು ತೊರೆದೆನೀ ಮನೆಯನ್ನ. ನೀನು ನಂದದೀಪ ಆದೆ ಈ ಮನೆಯಲ್ಲೆ" ಈ ಸಾಲುಗಳಿಗೆ ಮತ್ತೆ ಅರ್ಥ ಹಚ್ಚುವ ಮತ್ತು ವಿವರಗಳನ್ನು ನೀಡುವ ಅಗತ್ಯವೆ ಇಲ್ಲ. ಈ ಬಗೆಯ ಸಾಲುಗಳ ದಂಡೆ ಈ ಕಾವ್ಯದ ಮೂಲೆಮೂಲೆಗಳಲ್ಲಿ ಅಡಕವಾಗಿವೆ. ದೀಕ್ಷಾಕಾಂಡ ಮತ್ತು ಪರಿನಿರ್ವಾಣಕಾಂಡಗಳೊಂದಿಗೆ ಬುದ್ಧಚರಣ ಮುಕ್ತಾಯವಾಗುತ್ತದೆ.




| | |
|---|---|
| ಪ್ರಕಾಶಕರು | : ಅಂಕಿತ ಪುಸ್ತಕ, ಬೆಂಗಳೂರು |
| ಪುಟಗಳು | : 280 |
| ಬೆಲೆ | : ರೂ. 350/- |
| ವರ್ಷ | : 2020 |


ಒಟ್ಟಾರೆ ಬುದ್ಧಚರಣದ ಹಲವಾರು ಸಾಲುಗಳು ನಾನು ಈ ಎಲ್ಲ ಕಾಲದಲ್ಲೂ ಕಂಡ ಕವಿ ಎಚ್.ಎಸ್.ವಿ. ಯವರ ಮೂಲಭೂತ ಮನಸ್ಥಿತಿ, ಆಶಯ ಮತ್ತು ಸಿದ್ಧಾಂತಗಳನ್ನು ಬಿಂಬಿಸುವಂತಿವೆ. ಈ ಲೋಕದ ಹಲವಾರು ಬಗೆಯ ಜಟಿಲ ಸಮಸ್ಯೆಗಳಿಗೆ ಮತ್ತು ಪ್ರಶ್ನೆಗಳಿಗೆ ಅವರ ಮನಸ್ಥಿತಿ ಸ್ಪಂದಿಸುವ ರೀತಿ ಬುದ್ಧನ ಮಧ್ಯಮಮಾರ್ಗದೊಂದಿಗೆ ಒಂದಾಗಿದೆ. ದೀಕ್ಷಾಕಾಂಡದಲ್ಲಿ ಈ ಸಾಲುಗಳು 'ಇಲ್ಲವಾಗುವುದೊಂದೆ ಇರಲು ಇರುವ ಉಪಾಯ'. ಅದು ಹೇಗೆ ಸಾಧ್ಯ ಎಂಬುದನ್ನು ನಾವೆ ಕಂಡುಕೊಳ್ಳಬೇಕು. ಸರಳತೆಯೆ ಅನುಸರಣಕ್ಕೆ ಕಷ್ಟವೆಂಬ ಭಗವಾನ್ ಬುದ್ಧನ ಮಾತು ಕವಿ ಎಚ್.ಎಸ್.ವಿ. ಯವರು ಈ ಕಾಲದ ಹಲವಾರು ಜ್ವಲಂತ ಸಮಸ್ಯೆಗಳಿಗೆ ಕನ್ನಡಿ ಹಿಡಿದಂತಿದೆಯೆಂಬುದು ನನ್ನ ಅನಿಸಿಕೆ. ಸುಮಾರು ಎಂಟು ನೂರಕ್ಕೂ ಮೀರಿದ ಪದ್ಯಗಳ ಈ ಗುಚ್ಚವನ್ನು ಓದಿ ನಿಮ್ಮ ಎದೆಯೊಳಕ್ಕೆ ಇಳಿಸಿಕೊಳ್ಳಬಹುದು. ನಮ್ಮ ಬದುಕಿನ ಅನುಭವದ ಮತ್ತು ಮನಸ್ಥಿತಿಯ ಹಿನ್ನಲೆಯಲ್ಲಿ ಈ ಕಾವ್ಯದ ವಿಸ್ತಾರತೆಯ ಅರಿವನ್ನು ನಾವು ಮಾಡಿಕೊಳ್ಳಬಹುದು. ಸಂಘದ ಗ್ರಂಥಾಲಯದಲ್ಲಿ (ಅವರ ಹಸ್ತಾಕ್ಷರವಿರುವ) ಈ ಕೃತಿ ಲಭ್ಯವಿದೆ.

***ಡಾ. ವೆಂಕಟಾಚಲ ಹೆಗಡೆ***

# ರೇಣುಕಾ ನಿಡಗುಂದಿಯವರ ಅನುವಾದಿತ ಕೃತಿ ‘ಅಲೆಮಾರಿಯೊಬ್ಬಳ ಆತ್ಮವೃತ್ತಾಂತ’

ಅಲೆಮಾರಿಯೊಬ್ಬಳ ಆತ್ಮ ವೃತ್ತಾಂತ (ಮೂಲ: ಖಾನಾ ಬದೋಶ್) ಅಜಿತ್ ಕೌರ್ ಅವರ ಆತ್ಮಚರಿತ್ರೆಯಾಗಿದೆ. ಭಾರತ ವಿಭಜನೆಯೇ ಕಾರಣವಾಗಿ ಬಗೆ ಬಗೆಯ ಸಂಕಷ್ಟಗಳಿಗೆ ಒಳಗಾದ ಅವರು, ಮುಂದೆ ಮಗಳಾಗಿ, ತಾಯಿಯಾಗಿ, ತಂಗಿಯಾಗಿ, ಹೆಂಡತಿಯಾಗಿ, ಪ್ರೇಮಿಯಾಗಿ, ಪತ್ರಿಕೋದ್ಯಮಿಯಾಗಿ, ಲೇಖಕಿಯಾಗಿ, ಮತ್ತೆ ಇನ್ನೇನೋ ಆಗುತ್ತಾ ಹೋಗುವ ಹೊತ್ತು, ಗಟ್ಟಿಯಾಗುತ್ತಾ, ಮರುಕ್ಷಣ ಕರಗುತ್ತಾ ಬದುಕ ಸಾಗಿಸಿದರು. ಸಂವೇದನಾಶೀಲ ಹೆಣ್ಣೊಬ್ಬಳ ಬದುಕಿನ ಈ ಎಲ್ಲ ಆಯಾಮಗಳು ‘ಅಲೆಮಾರಿ’ಯಲ್ಲಿ ಅತ್ಯಂತ ಕಲಾತ್ಮಕವಾಗಿ ಘನೀಕೃತಗೊಂಡಿದೆ. ಕೌರ್ ಅವರ ಸಾಮಾಜಿಕ ಬದ್ಧತೆ ಮತ್ತು ಕ್ರಿಯಾಶೀಲತೆಯು ಈ ವಿವಿಧ ಮುಖಗಳ ಅಭಿವ್ಯಕ್ತಿಯನ್ನು ಇನ್ನಷ್ಟು ಸಾಂದ್ರಗೊಳಿಸಿ, ತೀವ್ರವಾಗಿ ಓದುಗನನ್ನು ಮುಟ್ಟುತ್ತದೆ. ಈಗಾಗಲೇ ಅಮೃತಾ ಪ್ರೀತಂ ಕವಿತೆಗಳನ್ನು ಸುಂದರವಾಗಿ ಕನ್ನಡಕ್ಕೆ ತಂದಿರುವ, ಖುಷವಂತ ಸಿಂಗರಂಥ ಪ್ರಸಿದ್ಧ ಲೇಖಕರನ್ನು ಓದಿಕೊಂಡ, ಅಮೃತಾ ಪ್ರೀತಮ್ ಸಂಗಾತಿ ಇಮ್ರೋಜರೊಂದಿಗೆ ಸಂಭಾಷಣೆ ನಡೆಸಿರುವ, ಕವಿ, ಲೇಖಕಿ ರೇಣುಕಾ ನಿಡಗುಂದಿಯವರು, ಅಜಿತ್ ಅವರ ಬರವಣಿಗೆಯ ಕಲಾವಂತಿಕೆಯನ್ನು ಅಷ್ಟೇ ಸುಂದರವಾಗಿ ಕನ್ನಡಕ್ಕೆ ತಂದಿದ್ದಾರೆ. ಅವರೀಗ ಕನ್ನಡ ಮತ್ತು ಪಂಜಾಬಿ ಭಾಷೆಗಳ ನಡುವಣ ಸೇತುವೆ.

***ಡಾ. ಪುರುಷೋತ್ತಮ ಬಿಳಿಮಲೆ***
(ಬೆನ್ನುಡಿಯಿಂದ)




ಪ್ರಕಾಶಕರು : ಅಹರ್ನಿಶಿ ಪ್ರಕಾಶನ, ಶಿವಮೊಗ್ಗ
ಪುಟಗಳು : 216
ಬೆಲೆ : ರೂ. 210/-
ವರ್ಷ : 2020

# ನಾಲ್ವರಿಗೆ ಶಿವರಾಮ ಕಾರಂತ ಪುರಸ್ಕಾರ

ಮೂಡಬಿದರೆಯ ಶಿವರಾಮ ಕಾರಂತ ಪ್ರತಿಷ್ಠಾನವು ಕನ್ನಡದ ಮೇರು ಸಾಹಿತಿ ಡಾ. ಶಿವರಾಮ ಕಾರಂತರ ಹೆಸರಿನಲ್ಲಿ ಪ್ರತೀ ವರ್ಷ ಸಾಹಿತ್ಯ ಕೃತಿಯನ್ನು ಗುರುತಿಸಿ ‘ಶಿವರಾಮ ಕಾರಂತ ಪುರಸ್ಕಾರ’ವನ್ನು ಹತ್ತು ಸಾವಿರ ರೂಪಾಯಿಗಳೊಂದಿಗೆ ಕಳೆದ ಇಪ್ಪತ್ತು ವರ್ಷಗಳಿಂದ ನೀಡುತ್ತಾ ಬಂದಿದೆ.

2020ರ ಸಾಲಿನ ಪುರಸ್ಕಾರಗಳನ್ನು ಸೊಂದಲಗೆರೆ ಲಕ್ಷ್ಮೀಪತಿ (ಸಾಮ್ರಾಟ್ ಅಶೋಕ), ಡಾ. ಭಾಸ್ಕರ ವಾಮನ (ವಿಷ್ಣುಭಟ್ ಗೋಡ್ಸೆಯ ನನ್ನ ಪ್ರವಾಸ), ಡಾ. ಟಿ.ಸಿ. ಪೂರ್ಣಿಮಾ (ನಾದ ನಕ್ಷತ್ರ) ಮತ್ತು ಸಾಹಿತ್ಯ ಪರಿಚಾರಿಕೆಗಾಗಿ ‘ಅಂಕಿತ ಪುಸ್ತಕದ ಪ್ರಕಾಶ್ ಕಂಬತ್ತಳ್ಳಿಮವರಿಗೆ ನೀಡಲಾಗುತ್ತಿದೆ ಎಂದು ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಡಾ. ಜಯಪ್ರಕಾಶ ಮಾವಿನಕುಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪುರಸ್ಕಾರಗಳ ಗೌರವ ಸಂಭಾವನೆಯನ್ನು ಎಂ.ಸಿ.ಎಸ್. ಬ್ಯಾಂಕ್ ಮೂಡುಬಿದಿರೆ, ದಿವಂಗತ ಶ್ರೀಮತಿ ವನಜಾಕ್ಷಿ ಸ್ಮರಣಾರ್ಥ ಶ್ರೀ ಕೆ. ಶ್ರೀಪತಿ ಭಟ್, ದಿವಂಗತ ಕೆ. ಶೀನಪ್ಪ ಸ್ಮರಣಾರ್ಥ ಶ್ರೀಮತಿ ಭಾನುಮತಿ ಶೀನಪ್ಪ ಅವರುಗಳು ಪ್ರಾಯೋಜಿಸುತ್ತಿದ್ದಾರೆ. ಈ ವರ್ಷದಿಂದ ಆರಂಭವಾದ ಸಾಹಿತ್ಯ ಪರಿಚಾರಿಕೆಗಾಗಿ ನೀಡುತ್ತಿರುವ ಪುರಸ್ಕಾರದ ಗೌರವ ಸಂಭಾವನೆಯನ್ನೂ ದಿ. ಪ್ರೊ. ಎಂ. ರಾಮಚಂದ್ರರವರ ಸ್ಮರಣಾರ್ಥ ಅವರ ಪತ್ನಿ ಶ್ರೀಮತಿ ಶಾರದಾ ಇವರುಗಳು ಪ್ರಾಯೋಜಿಸುತ್ತಿದ್ದಾರೆ ಎಂದು ಡಾ. ಮಾವಿನಕುಳಿ ತಿಳಿಸಿದ್ದಾರೆ.




ದೆಹಲಿ ಕರ್ನಾಟಕ ಸಂಘದ
ಸುಸಜ್ಜಿತವಾದ ಆರ್ಟ್ ಗ್ಯಾಲರಿ
ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ.
ಹೆಚ್ಚಿನ ಮಾಹಿತಿಗಾಗಿ
ದೆಹಲಿ ಕರ್ನಾಟಕ ಸಂಘದ
ಕಾರ್ಯಾಲಯವನ್ನು ಸಂಪರ್ಕಿಸಿರಿ.
ದೂರವಾಣಿ :
011-26109615 / 26104818





# ಓದುಗರ ಸ್ಪಂದನ

ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆ ಮತ್ತು ಕಾರ್ಯಕಾರಿ ಸಮಿತಿಯವರಿಗೆ, ಲಲಿತ ಶ್ರೀನಿವಾಸ್‌ರವರ ವಂದನೆಗಳು.

ನಾವು ದೆಹಲಿ ಬಿಟ್ಟು 21ವರ್ಷಗಳಾದರೂ ನಮಗೆ ಸಂಘದ ಮತ್ತು ಲೇಡಿಸ್ ಕ್ಲಬ್ ನೆನಪು ಇನ್ನೂ ಹಸಿರಾಗಿದೆ. ತಾವುಗಳು ನಮ್ಮನ್ನು ಮರೆಯದೆ ನಮ್ಮ ದುಃಖದಲ್ಲಿ ಸಾಂತ್ವನ ತಿಳಿಸಿದ್ದಕ್ಕೆ ತುಂಬಾ ಧನ್ಯವಾದಗಳು. ತಮ್ಮೆಲ್ಲರಿಗೂ ನಾನು ಮತ್ತು ಕುಟುಂಬದವರು ಕೃತಜ್ಞತೆಯನ್ನು ತಿಳಿಸುತ್ತೇನೆ. ‘ಅಭಿಮತ’ ತಪ್ಪದೆ ಕಳುಹಿಸುತ್ತಿರುವುದಕ್ಕೆ ವಂದನೆಗಳು.

*ಲಲಿತಾ ಶ್ರೀನಿವಾಸ್*



# ಕರ್ನಾಟಕ ಭವನದ ಜಾಲತಾಣ, ಪೋರ್ಟಲ್ ಲೋಕಾರ್ಪಣೆ



ನವದೆಹಲಿಯ ಚಾಣಕ್ಯಪುರಿಯಲ್ಲಿರುವ ಕರ್ನಾಟಕ ಭವನ-1 ರ ಕಾವೇರಿಯಲ್ಲಿ ದಿನಾಂಕ 20.02.2021 ರಂದು ನಡೆದ ನಡೆದ ಉದ್ಘಾಟನೆ ಕಾರ್ಯಕ್ರಮದಲ್ಲಿ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಕರ್ನಾಟಕ ಭವನದ ನಿವಾಸಿ ಆಯುಕ್ತ ಡಾ. ಸಂದೀಪ್ ದವೆ ಅವರು ಕರ್ನಾಟಕ ಭವನದ ಜಾಲತಾಣ ಹಾಗೂ ಕೊಠಡಿ ಕಾಯ್ದಿರಿಸುವಿಕೆ ಪೋರ್ಟಲ್‌ನ್ನು ಲೋಕಾರ್ಪಣೆಗೊಳಿಸಿದರು.

ನವದೆಹಲಿಯ ಕರ್ನಾಟಕ ಭವನವು ಅತಿಗಣ್ಯ ಅತಿಥಿಗಳು ಆಗಮಿಸುವ ರಾಜ್ಯದ ಆತಿಥ್ಯ ಸಂಸ್ಥೆಯಾಗಿದೆ. ಈ ಜಾಲತಾಣ ಬಳಸಿಕೊಂಡು ಮತ್ತಷ್ಟು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸಲು ಅನುವಾಗುವತ್ತ ಹಾಗೂ ಕರ್ನಾಟಕ ಭವನದ ಎಲ್ಲಾ ಕಾರ್ಯಚಟುವಟಿಕೆಗಳನ್ನು ಗಣಕೀಕರಣಗೊಳಿಸುವ ನಿಟ್ಟಿನಲ್ಲಿ ನಾವೀನ್ಯತೆಯನ್ನೊಳಗೊಂಡಿರುವ ಜಾಲತಾಣ (ವೆಬ್ ಸೈಟ್) ಹಾಗೂ ಪೋರ್ಟಲ್ ಪ್ರಾರಂಭಿಸಲಾಗಿದೆ ಎಂದು ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ ಹಾಗೂ ಕರ್ನಾಟಕ ಭವನದ ನಿವಾಸಿ ಆಯುಕ್ತ ಡಾ. ಸಂದೀಪ್ ದವೆ ಅವರು ತಿಳಿಸಿದರು.

ರಾಜ್ಯಕ್ಕೆ ಸಂಬಂಧಿಸಿದ ಮಾಹಿತಿ ವಿವರಗಳು ಈ ಜಾಲತಾಣದಲ್ಲಿ ಅಳವಡಿಸಲಾಗಿದೆ. ರಾಜ್ಯದಿಂದ ದೆಹಲಿಗೆ ಆಗಮಿಸುವ ಅತಿಥಿಗಳು ಸೇರಿದಂತೆ ಸಾರ್ವಜನಿಕರಿಗೆ ಸುಲಭವಾಗಿ ಮಾಹಿತಿ ವಿವರ ದೊರೆಯಲಿ ಎಂಬ ಉದ್ದೇಶದಿಂದ ಈ ಜಾಲತಾಣವನ್ನು ಸಾರ್ವಜನಿಕರಿಗೆ ಮುಕ್ತಗೊಳಿಸಲಾಗಿದೆ. ಈ ಹಿಂದೆ ಕರ್ನಾಟಕ ಭವನವು ಜಾಲತಾಣ ಹೊಂದಿತ್ತು. ಸಕಾಲಿಕವಾಗಿ ಹಾಗೂ ಸಮಗ್ರವಾಗಿ ಮಾಹಿತಿಯನ್ನೊಳಗೊಂಡ ನೂತನ ತಂತ್ರಾಂಶವನ್ನು ಅಳವಡಿಸಿಕೊಂಡು ಬೆಂಗಳೂರಿನ ಕರ್ನಾಟಕ ಮುನ್ಸಿಪಲ್ ಡಾಟಾ ಸೋಸೈಟಿ ಇವರು ಈ ಜಾಲತಾಣ ಅನ್ನು ಅಭಿವೃದ್ಧಿಪಡಿಸಿದ್ದಾರೆ ಎಂದವರು ಹೇಳಿದರು.ಈ ಜಾಲತಾಣಗಳು ಸಾಕಾರಗೊಳ್ಳಲು ಕಾರಣರಾದ ಅಧಿಕಾರಿ, ಸಿಬ್ಬಂದಿಯವರನ್ನು ಶ್ಲಾಘಿಸಿದರು.

ಹೊಸದಾಗಿ ಪ್ರಾರಂಭಗೊಂಡ www.karnatakabhavan.karnataka.gov.in ಈ ವೆಬ್ ತಾಣದಲ್ಲಿ ರಾಜ್ಯದ ರಾಯಭಾರಿ ಕಚೇರಿ ಎನಿಸಿಕೊಂಡಿರುವ ನವದೆಹಲಿಯ ಕರ್ನಾಟಕ ಭವನಕ್ಕೆ ಸಂಬಂಧಿಸಿದ ಮಾಹಿತಿ ವಿವರ, ಸರ್ಕಾರದ ಪ್ರಮುಖ ಆದೇಶಗಳು, ಸೌಲಭ್ಯಗಳು, ವಿಮಾನ ನಿಲ್ದಾಣದಿಂದ ಹಾಗೂ ರೈಲ್ವೆ ನಿಲ್ದಾಣದಿಂದ ಭವನಕ್ಕಿರುವ ದೂರ, ರಾಜ್ಯಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಈ ಜಾಲತಾಣವು ಒಳಗೊಂಡಿದೆ.

ಕರ್ನಾಟಕ ಭವನಕ್ಕೆ ಆಗಮಿಸುವ ಅತಿಥಿಗಳ ಕೊಠಡಿ ಕಾಯ್ದಿರಿಸುವಿಕೆ, ತಂಗುವಿಕೆ ಹಾಗು ಆಗಮನ ಹಾಗೂ ನಿರ್ಗಮನದ ಕುರಿತ ಇಲ್ಲಿಯವರೆಗೆ ಮ್ಯಾನ್ಯುಯಲ್ ಆಗಿ ನಿರ್ವಹಿಸಲಾಗುತ್ತಿತ್ತು. ದೀರ್ಘವಾದ ಈ ಪ್ರಕ್ರಿಯೆಗೆ ಪರ್ಯಾಯವಾಗಿ ಸರಳೀಕರಿಸುವ ನಿಟ್ಟಿನಲ್ಲಿ ಪೋರ್ಟಲ್ ತತ್ರಾಂಶವನ್ನು ಕರ್ನಾಟಕ ಭವನ ಇಂದು ಪ್ರಾರಂಭಿಸಿದ್ದು, ಮೊದಲನೇ ಹಂತವಾಗಿ ಅತಿಥಿಗಳ ಕೊಠಡಿ ಕಾಯ್ದಿರಿಸುವಿಕೆ, ಆಗಮನ-ನಿರ್ಗಮನದ ಮಾಹಿತಿಯನ್ನು ಆನ್ ಲೈನ್ ಮೂಲಕವೇ ಕರ್ನಾಟಕ ಭವನದ ಹಂತದಲ್ಲಿಯೇ ನಿರ್ವಹಿಸಲಾಗುತ್ತಿದೆ. ಎರಡನೇ ಹಂತದಲ್ಲಿ ಶೀಘ್ರವಾಗಿ, ಈ ಪ್ರಕ್ರಿಯೆಯನ್ನು ಸಾರ್ವಜನಿಕವಾಗಿ ಮುಕ್ತಗೊಳಿಸಲಾಗುವುದೆಂದು ಕರ್ನಾಟಕ ಭವನದ ಉಪ ನಿವಾಸಿ ಆಯುಕ್ತ ಎಚ್.ಪ್ರಸನ್ನ ಅವರು ಮಾಹಿತಿ ನೀಡಿದರು.

ಅತಿಥಿಗಳ ಕೊಠಡಿ ಕಾಯ್ದಿರಿಸುವಿಕೆಯ ವಿವರ ಸ್ವೀಕರಿಸಿದ ನಂತರ, ಆನ್ ಲೈನ್‌ನಲ್ಲಿ ಕಾಯ್ದಿರಿಸಿ, ಸಂಬಂಧಿಸಿದವರಿಗೆ ತಿಳಿಸಲಾಗುವುದು. ಅತಿಥಿಗಳು ಭವನಕ್ಕೆ ಆಗಮಿಸಿದ ಸಂದರ್ಭದಲ್ಲಿ ಅವರ ತಂಗುವಿಕೆಯ ಮುಂತಾದ ಮಾಹಿತಿ ವಿವರಗಳು ಆನ್ ಲೈನ್ ಮೂಲಕ ಅತಿಥಿಗಳು ಪಡೆಯುವ ವ್ಯವಸ್ಥೆ ಈ ನಾವೀನ್ಯತೆಯ ತಂತ್ರಾಂಶ ಒಳಗೊಂಡಿದೆ ಎಂದವರು ಹೇಳಿದರು. ಸುಲಲಿತವಾಗಿ ಹಾಗೂ ಶೀಘ್ರವಾಗಿ ಕಾರ್ಯನಿರ್ವಹಣೆಯ ಹಿನ್ನೆಲೆಯಲ್ಲಿ ಭವನವು ಕೊಠಡಿ ಕಾಯ್ದಿರಿಸುವಿಕೆ ಹಾಗೂ ಊಟೋಪಚಾರ, ಆಗಮನ-ನಿರ್ಗಮನಕ್ಕೆ ಪೋರ್ಟಲ್ ಬಳಸಿಕೊಂಡು ಕಾರ್ಯನಿರ್ವಹಿಸಲಾಗುವುದೆಂದು ಎಚ್. ಪ್ರಸನ್ನ ಅವರು ತಿಳಿಸಿದರು.

ವಿಶೇಷ ನಿವಾಸಿ ಆಯುಕ್ತ ವಿಜಯ ರಂಜನ್ ಸಿಂಗ್, ಅಪರ ನಿವಾಸಿ ಆಯುಕ್ತ ಗುರ್ನೀತ್ ತೇಜ್ ಕರ್ನಾಟಕ ಭವನದ ಅಧಿಕಾರಿ, ಸಿಬ್ಬಂದಿಗಳು ಉಪಸ್ಥಿತರಿದ್ದರು.

ಕರ್ನಾಟಕ ಭವನದ ಉಪ ಸಮನ್ವಯಾಧಿಕಾರಿ ರೇಣುಕುಮಾರ ಅವರು ಸ್ವಾಗತಿಸಿ, ವಂದಿಸಿದರು.

**ಅಮರೇಶ**

# 'ನನ್ನ ದೇಶ, ನನ್ನ ಭಾಷೆ' ವಿನೂತನ ಮಾತೃಭಾಷಾ ದಿನಾಚರಣೆ

## ಅಂತರ್ಜಾಲದಲ್ಲಿ 5000ಕ್ಕೂ ಹೆಚ್ಚು ಜನ ವೀಕ್ಷಿಸಿದ ಕಾರ್ಯಕ್ರಮ



ವಿಶಾಲವಾದ ಸಮುದ್ರ. ಅದರ ಮಧ್ಯೆ ಒಂದು ಸುಂದರ ದ್ವೀಪ. ಅಲ್ಲಿ ನಾನಾ ತರದ ಹಕ್ಕಿಗಳು. ಆ ಹಕ್ಕಿಗಳಿಗೆ ಒಂದೊಂದು ಸ್ವರ. ಅದನ್ನು ಆಲಿಸುವುದೇ ಅತಿ ಮಧುರ. ಈ ಸುಂದರ ದ್ವೀಪವೇ ಆಗಿರುವ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಕನ್ನಡದ ಮಹನೀಯರು ಕಟ್ಟಿದ ನಮ್ಮೆಲ್ಲರ ಹೆಮ್ಮೆಯ ಸಂಸ್ಥೆ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ. ಇಲ್ಲಿ ಇತ್ತೀಚೆಗೆ ಅಂತರರಾಷ್ಟ್ರೀಯ ಮಾತೃಭಾಷಾ ದಿನದ ಅಂಗವಾಗಿ ಫೇಸ್‌ಬುಕ್ ನೇರ ಪ್ರಸಾರದ ಮೂಲಕ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳು ಹಾಗೂ ಶಿಕ್ಷಕ - ಶಿಕ್ಷಕೇತರ ವೃಂದದವರು ಪ್ರಸ್ತುತ ಪಡಿಸಿದ 'ನನ್ನ ದೇಶ ನನ್ನ ಭಾಷೆ' ವಿನೂತನ ಕಾರ್ಯಕ್ರಮವು ಪ್ರತಿಯೊಬ್ಬರ ಮಾತೃಭಾಷೆ ನಾಲಗೆಯಲ್ಲಿ ನಲಿದಾಡಿದ ಸುಂದರ ಕ್ಷಣಗಳಿಗೆ ಸಾಕ್ಷಿಯಾಯಿತು.

ಸಂಸ್ಥೆಯ ವಿದಾರ್ಥಿಗಳಾದ ಧನುಷ್, ಸಾಯಿ, ಪ್ರೇರಣಾ ಉಷಾರಾಣಿ, ತಾನಿಯಾ ಗೋಯಲ್, ಸುಶ್ಮಿತಾ ಸುವರ್ಣ, ಶ್ರೇಯಾ, ಅಭಿಷೇಕ್ ಉಭಾಳೆ, ಮೊಹಮ್ಮದ್ ಆದಿಲ್ ಅವರು ಕನ್ನಡ, ತೆಲುಗು, ಹಿಂದಿ, ಬೆಂಗಾಲಿ, ಸಂಸ್ಕೃತ, ತುಳು, ಭೋಜ್‌ಪುರಿ, ಮರಾಠಿ, ಗಢ್‌ವಾಲಿ ಭಾಷೆಯಲ್ಲಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿದರು.

ಹಾಗೆಯೇ ಶಿಕ್ಷಕ ಹಾಗೂ ಶಿಕ್ಷಕೇತರ ವೃಂದದವರಾದ ಪ್ರಶಾಂತ ಕುಮಾರ್, ಅರವಿಂದ ಬಿಜ್ಜೈ, ಎನ್. ಎಂ. ಸೌಮ್ಯ, ಡೆರಿಲ್ ಜೆಸಿಕಾ ಫೆರ್ನಾಂಡಿಸ್, ಎನ್. ವಿಜಯಾ ಕುಮಾರಿ, ಮಾಲಾ ಗೋಪಾಲ್, ಎಂ. ಎಸ್. ಲಾವಣ್ಯ, ಸಂಜಯ್ ಕುಮಾರ್, ಜ್ಯೋತಿ ಎಸ್. ಪೋದ್ದಾರ್, ಗಣೇಶ ಹೆಗಡೆ, ಎಸ್. ಸತ್ಯ, ವಂದನಾ, ಬಿದಿಶಾ ಚಟರ್ಜಿ, ಹರಿಪ್ರಸಾದ್ ಶ್ರೇಷ್ಠಾ, ಸೀಮಾ, ಜಿತೇಂದ್ರ ಕುಮಾರ್, ಸೋನಂ ಮ್ಯಾಂಗೇನ್, ಲಿಂಗರಾಜ್ ಪಲಾಯಿ, ರಾಮಾವಧ್, ದಿಲೀಪ್ ಕುಮಾರ್ ತಿವಾರಿ ಅವರು ತುಳು, ಕನ್ನಡ, ಕೊಡವ, ಕೊಂಕಣಿ, ಮಲಯಾಳಂ, ತಮಿಳು, ತೆಲುಗು, ಹಿಂದಿ, ಮರಾಠಿ, ಸಂಸ್ಕೃತ, ಗುಜರಾತಿ, ಪಂಜಾಬಿ, ಬೆಂಗಾಲಿ, ನೇಪಾಳಿ, ಹರಿಯಾಣ್ವಿ, ರಾಜಸ್ಥಾನಿ, ಗಢ್‌ವಾಲಿ, ಒಡಿಯಾ, ಅವಧಿ, ಭೋಜ್‌ಪುರಿ ಹೀಗೆ 20 ಭಾಷೆಗಳಲ್ಲಿ ತಮ್ಮ ವಿಚಾರಗಳನ್ನು ಪ್ರಸ್ತುತ ಪಡಿಸಿದರು. ಜೊತೆಗೆ ಎಲ್ಲರೂ ತಮ್ಮ ಭಾಷೆಯ ಹೆಸರನ್ನು ಅದೇ ಭಾಷಾ ಲಿಪಿಯನ್ನು ಬಳಸಿ ವೇದಿಕೆಯ ಮುಂಭಾಗದಲ್ಲಿದ್ದ ಬಿಳಿ ಹಾಳೆಯಲ್ಲಿ ಬರೆದಿರುವುದು ಕಾರ್ಯಕ್ರಮದ ಕಳೆಯನ್ನು ಮತ್ತಷ್ಟು ಹೆಚ್ಚಿಸಿತು.

ಕಾರ್ಯಕ್ರಮದ ಮುಖ್ಯ ಅತಿಥಿ, ಸಂಸ್ಕೃತಿ ಮಂತ್ರಾಲಯದ ಹಿರಿಯ ಅಧಿಕಾರಿ, ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷ ಹಾಗೂ ಸಾಹಿತಿ ಡಾ. ಅವನೀಂದ್ರನಾಥ್ ರಾವ್ ಮಾತನಾಡಿದರು. ಭಾಷಾ ಸಾಮರಸ್ಯ ಭಾರತದ ಹಿರಿಮೆ. ಇಲ್ಲಿ ಎಲ್ಲ ಭಾಷೆಗಳಿಗೂ ಸಮಾನ ಗೌರವ. ನಾವು ನಮ್ಮ ದೇಶದಲ್ಲಿ ಯಾವ ಭಾಷೆಯನ್ನು ರಾಷ್ಟ್ರ ಭಾಷೆ ಎಂದು ಪರಿಗಣಿಸಿಲ್ಲ. ಒಂದು ಭಾಷೆಯನ್ನು ರಾಷ್ಟ್ರ ಭಾಷೆ ಎಂದು ಘೋಷಿಸದಿರುವುದೇ ಮಾತೃಭಾಷೆಗೆ ಸಂದ ಗೌರವ. ನಮ್ಮ ದೇಶ ಬಹುಭಾಷಾ, ಬಹುಸಂಸ್ಕೃತಿಯ ನೆಲೆಬೀಡು. ದೇಶವನ್ನೇ ಸುತ್ತಿ ಬಂದಂತಹ ಅನುಭವವಾದ ಈ ಕಾರ್ಯಕ್ರಮದಲ್ಲಿ ನಾನು ಭಾಗಿಯಾಗಿರುವುದೇ ನನ್ನ ಸೌಭಾಗ್ಯ. ಈ ಕಾರ್ಯಕ್ರಮವೇ ಒಂದು ಆದರ್ಶ. ಇಂತಹ ವಿನೂತನ ಕಾರ್ಯಕ್ರಮವನ್ನು ಎಲ್ಲಾ ಶಾಲೆಗಳಲ್ಲಿ ಪ್ರತಿವರ್ಷ ಆಯೋಜಿಸಬೇಕು ಎಂದು ಅವನೀಂದ್ರನಾಥ್ ಹೇಳಿದರು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಹಾಗೂ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಗೌರವ ವ್ಯವಸ್ಥಾಪಕ ಡಾ. ಎಂ.ಎಸ್. ಶಶಿಕುಮಾರ್ ಅವರು ಅತಿಥಿಗಳನ್ನು ಸ್ವಾಗತಿಸಿ, ನಮ್ಮ ನಾಡು-ನುಡಿ ಬೇರೆ ಬೇರೆ ಆದರೂ ನಮ್ಮೆಲ್ಲರ ಭಾವ ಒಂದೇ ನಾವು ಭಾರತೀಯರು. ಮಾತೃಭಾಷೆ ಅಥವಾ ತಾಯಿನುಡಿ ಎಂದರೆ ನಾವು ಬಾಲ್ಯದಲ್ಲಿ ಪ್ರಥಮವಾಗಿ ಕಲಿತ ಭಾಷೆ. ನಾವು ನಮ್ಮ ರಾಜ್ಯ ಬಿಟ್ಟು ಹೊರಗೆ ಬಂದಾಗ ಮಾತೃಭಾಷೆಯ ಮಹತ್ವ ಏನು ಎಂಬುದು ನಮಗೆ ತಿಳಿದಿದೆ. ಮಾತೃಭಾಷೆಯ ಬಗ್ಗೆ ಅಭಿಮಾನ ಮನದಲ್ಲಿ ಇದ್ದರೆ ಮಾತ್ರ ಸಾಲದು, ಅದು ನಮ್ಮ ಮನೆಯಲ್ಲಿಯೂ ಬೆಳೆಯಬೇಕು. ನಮ್ಮ ಮಾತೃಭಾಷೆ ಬಗ್ಗೆ ಅಪಾರ ಪ್ರೀತಿ, ಗೌರವ ತೋರಿಸೋಣ ಎಂದು ಈ ಸಂದರ್ಭದಲ್ಲಿ ಹೇಳಿದರು.

ಸಂಸ್ಥೆಯ ಗೌರವ ಖಜಾಂಚಿ ಟಿ.ಪಿ. ಬೆಳ್ಳಿಯಪ್ಪ, ಕಾರ್ಯಕಾರಿ ಸಮಿತಿ ಸದಸ್ಯರಾದ ಮಾಲಿನಿ ಪ್ರಹ್ಲಾದ್, ಗಿರೀಶ್ ಎಸ್., ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲರಾದ ಪ್ರಶಾಂತ್ ಕುಮಾರ್ ಉಪಸ್ಥಿತರಿದ್ದರು. ಶಿಕ್ಷಕರಾದ ಪ್ರೋಮಿಳಾ ದಹಿಯಾ, ಅರವಿಂದ ಬಿಜ್ಜೈ, ಪ್ರೇರಣಾ, ರೇಖಾ ಐ. ಕಾರ್ಯಕ್ರಮ ನಿರೂಪಿಸಿದರು.

***ಅರವಿಂದ ಬಿಜ್ಜೈ***

# ದೆಹಲಿ ಭಾಷಾ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಒಕ್ಕೂಟ ಅಸ್ತಿತ್ವಕ್ಕೆ




ಹೊರನಾಡಿನಲ್ಲಿ ಒಂದು ಭಾಷೆಯನ್ನು ಬೆಳೆಸಲು ಶಿಕ್ಷಣ ಸಂಸ್ಥೆ ಅನಿವಾರ್ಯ. ಈ ನೆಲೆಯಿಂದ ದೆಹಲಿಯಲ್ಲಿ ಅನೇಕ ಅಲ್ಪಸಂಖ್ಯಾತ ಭಾಷಾ ಸಂಸ್ಥೆಗಳು ತಲೆ ಎತ್ತಿ ನಿಂತಿವೆ ಮಾತ್ರವಲ್ಲ, ಗುಣಮಟ್ಟದ ಶಿಕ್ಷಣಕ್ಕೆ ತನ್ನದೇ ಆದ ಕೊಡುಗೆ ನೀಡುತ್ತಿವೆ. ಆದರೆ ಇತ್ತೀಚೆಗೆ ದೆಹಲಿ ಸರಕಾರವು ಕೆಲವು ನಿಯಾಮವಳಗಳನ್ನು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಹೇರುತ್ತಿರುವ ಕಾರಣದಿಂದಾಗಿ ಭಾಷಾ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಲ್ಲಿ ಆಡಳಿತ ಪ್ರಕ್ರಿಯೆಗೆ ಹಾಗೂ ಮಕ್ಕಳ ಕಲಿಕೆಗೆ ಸಮಸ್ಯೆಯಾಗುತ್ತಿರುವುದನ್ನು ಮನಗಂಡಂತಹ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕ್ರಿಯಾಶೀಲ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಅವರು, ತಮ್ಮ ಅಧ್ಯಕ್ಷತೆಯಲ್ಲಿ ದೆಹಲಿಯಲ್ಲಿರುವ ಭಾಷಾ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಯ ಪ್ರತಿನಿಧಿಗಳ ಸಭೆಯನ್ನು ದಿನಾಂಕ 07.02.2021ರಂದು ನವದೆಹಲಿಯ ಲೋಧಿ ಎಸ್ಟೇಟ್‌ನಲ್ಲಿರುವ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಿದರು.

ಸಭೆಯಲ್ಲಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ, ಕೇರಳ ಶಿಕ್ಷಣ ಸಂಸ್ಥೆ, ಆಂಧ್ರ ಶಿಕ್ಷಣ ಸಂಸ್ಥೆ, ಸಿಂಧಿ ಶಿಕ್ಷಣ ಸಂಸ್ಥೆ, ಹಾಗೂ ಬೆಂಗಾಲಿ ರೈಸಿನ್ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಪದಾಧಿಕಾರಿಗಳು ಭಾಗವಹಿಸಿದ್ದರು. ದೆಹಲಿಯಲ್ಲಿರುವ ಭಾಷಾ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ಎದುರಿಸುತ್ತಿರುವ ಶಿಕ್ಷಕರ ನೇಮಕಾತಿಯಲ್ಲಿ ಸಿಟಿಇಟಿ ಖಡ್ಡಾಯ, ಶಾಲಾಶುಲ್ಕ ಮುಂತಾದ ಪ್ರಮುಖ ಸಮಸ್ಯೆಗಳ ಕುರಿತಾಗಿ ಸಭೆಯಲ್ಲಿ ಗಂಭೀರವಾಗಿ ಚರ್ಚಿಸಲಾಯಿತು.

ಮುಖ್ಯವಾಗಿ ಇತ್ತೀಚೆಗೆ ಫೆಬ್ರವರಿ 4, 2021ರಂದು ದೆಹಲಿ ಶಿಕ್ಷಣ ಇಲಾಖೆಯಿಂದ ಬಂದಿರುವಂತಹ ಸುತ್ತೋಲೆಯ ಪ್ರಕಾರ ದೆಹಲಿಯಲ್ಲಿರುವ ಭಾಷಾ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯನ್ನು ಆಡಳಿತಾತ್ಮಕವಾಗಿ ಮುನ್ನಡೆಸಲು ಸುತ್ತಮುತ್ತಲಿನ ಶಾಲೆಗಳ ಮುಖ್ಯಸ್ಥರನ್ನು ಪ್ರತಿನಿಧಿಗಳನ್ನಾಗಿ ಮಾಡಿ ಸಂಸ್ಥೆಯಲ್ಲಿ ನಡೆಯುವ ನೇಮಕಾತಿ ಪ್ರಕ್ರಿಯೆ, ಆಡಳಿತಾತ್ಮಕ ಪ್ರಕ್ರಿಯೆಯು ಪಾರದರ್ಶಕವಾಗಿ ನಡೆಯುತ್ತಿದೆಯೇ? ಸರಕಾರದ ನೀತಿ ನಿಯಮಗಳನ್ನು ಪಾಲನೆ ಮಾಡುತ್ತಿದೆಯೇ? ಈ ರೀತಿ ಮೇಲ್ವಿಚಾರಣೆ ನಡೆಸುವಂತೆ ದೆಹಲಿ ಸರಕಾರವು ಶಿಕ್ಷಣ ಇಲಾಖೆಗೆ ಆದೇಶ ನೀಡಿರುವುದು ಭಾಷಾ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯ ಹಿತದೃಷ್ಟಿಗೆ ಪೂರಕವಲ್ಲ ಎಂಬ ಒಕ್ಕೊರಲಿನ ಅಭಿಪ್ರಾಯವು ಸಭೆಯಲ್ಲಿ ವ್ಯಕ್ತವಾಯಿತು. ಸುಮಾರು 60-70 ವರ್ಷಗಳಿಂದ ದೆಹಲಿಯಲ್ಲಿ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಾ ಬಂದಿರುವ ಭಾಷಾ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಮೇಲೆ ಇದೀಗ ಸರಕಾರ ವಿಶ್ವಾಸವನ್ನು ಇಡದೆ ಈ ರೀತಿಯ 'ಮೇಲ್ವಿಚಾರಣೆ ಸಮಿತಿ'ಯನ್ನು ನೇಮಕ ಮಾಡುತ್ತಿರುವುದಕ್ಕೆ ಅಸಮಧಾನ ವ್ಯಕ್ತವಾಯಿತು.

ಹಾಗೆಯೇ ನೇಮಕಾತಿ, ಆಡಳಿತಾತ್ಮಕ ಪ್ರಕ್ರಿಯೆಯಲ್ಲಿ ಹೆಚ್ಚಿನ ಪಾರದರ್ಶಕತೆ ತರಬೇಕಾದರೆ ಸರಕಾರ ಇನ್ನಷ್ಟು ನಿಯಮಗಳನ್ನು ಜಾರಿಗೆ ತರಲಿ. ಭಾಷಾ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ಈಗಾಗಲೇ ಸರಕಾರದ ಎಲ್ಲಾ ನಿಯಮಗಳನ್ನು ಪಾಲನೆ ಮಾಡುತ್ತಿದೆ, ಮುಂದೆಯೂ ಮಾಡುತ್ತದೆ. ಶಿಕ್ಷಕರ ನೇಮಕಾತಿಗೆ ಸಿಟಿಇಟಿ ಅರ್ಹತಾ ಪರೀಕ್ಷೆಯನ್ನು ಖಡ್ಡಾಯ ಮಾಡಿರುವುದರಿಂದ ಅಲ್ಪಸಂಖ್ಯಾತ ಭಾಷಾಗಳಾದ ಕನ್ನಡ, ತಮಿಳು, ತೆಲುಗು, ಮಲಯಾಳಂ, ಸಿಂಧಿ, ಬೆಂಗಾಲಿ ಮುಂತಾದ ಭಾಷೆಯ ಶಿಕ್ಷಕರನ್ನು ನೇಮಕ ಮಾಡಲು ಬಹಳಷ್ಟು ಸಮಸ್ಯೆಗಳಾಗುತ್ತಿವೆ. ರಾಷ್ಟ್ರ ರಾಜಧಾನಿಯಲ್ಲಿ ಈ ನಿಯಮಾವಳಿಗಳನ್ನು ಪಾಲನೆ ಮಾಡಲು ಕಷ್ಟಸಾಧ್ಯ. ಹಾಗಾಗಿ ಈ ನಿಯಮದಲ್ಲಿಯೂ ಸಡಿಲಿಕೆ ತರಬೇಕು ಎಂಬ ಅಭಿಪ್ರಾಯ ವ್ಯಕ್ತವಾಯಿತು. ಜೊತೆಗೆ ತಾತ್ಕಾಲಿಕ ಶಿಕ್ಷಕರ ನೇಮಕಾತಿಯಲ್ಲಿಯೂ ಸರಕಾರದ ಅನುಮತಿ ಪಡೆದು ಮಾಡಬೇಕು ಎನ್ನುವುದು ಸರಕಾರದ ಇನ್ನೊಂದು ಆದೇಶ. ಈ ಆದೇಶದಂತೆ ಸಂಸ್ಥೆಗೆ ಅಗತ್ಯವಿರುವ ತಾತ್ಕಾಲಿಕ ಶಿಕ್ಷಕರ ಅಗತ್ಯತೆಯನ್ನು ಉಲ್ಲೇಖಿಸಿ ಇಲಾಖೆಗೆ ಪತ್ರಗಳನ್ನು ಕಳುಹಿಸಿದರೂ ಕೆಲವೊಮ್ಮೆ ಈ ಪ್ರಕ್ರಿಯೆಯು ವಿಳಂಬವಾಗುತ್ತದೆ. ಇದರ ಪರಿಣಾಮ ಪಾಠ ಪ್ರವಚನಗಳಿಲ್ಲದೆ ಮಕ್ಕಳ ಮೇಲಾಗುವುದನ್ನು ಗಮನಿಸಬೇಕು ಎಂಬ ವಿಚಾರವು ವ್ಯಕ್ತವಾಯಿತು.

ಅದಲ್ಲದೆ ಸರಕಾರವು ಇದೀಗ ಆಡಳಿತ ಮಂಡಳಿಗಳಿಗೆ ಭಾಷಾ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆ ಎಂಬುದನ್ನು ಸಾಬೀತುಪಡಿಸಿ ಎಂದು ಪ್ರಶ್ನೆ ಮಾಡುತ್ತಿರುವುದು, ಒತ್ತಾಯಿಸುತ್ತಿರುವುದು ಅಥವಾ ಅರ್ಹತಾ ಪ್ರಮಾಣವನ್ನು ಕೇಳುತ್ತಿರುವುದು ಒಪ್ಪತಕ್ಕದ್ದಲ್ಲ. ಒಟ್ಟಾಗಿ ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಬೇಕಾದರೆ ದೆಹಲಿಯಲ್ಲಿರುವ ಭಾಷಾ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳ ಸಂಘಟನೆಯನ್ನು ಮಾಡಬೇಕೆಂದು ಇಂದಿನ ಸಭೆಯಲ್ಲಿ ಒಕ್ಕೊರಲಿನ ಅಭಿಪ್ರಾಯ ವ್ಯಕ್ತವಾಯಿತು. ಅದರಂತೆ 'Adhoc committee of Minority Schools' ಎಂಬ ಸಂಘಟನೆಯನ್ನು ಇಂದು ಸ್ಥಾಪಿಸಲಾಯಿತು.

ಈ ಸಂಘಟನೆಯ ಅಧ್ಯಕ್ಷರನ್ನಾಗಿ ದೆಹಲಿ ಕೇರಳ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಕೆ.ಪಿ. ಮೆನನ್ ಅವರನ್ನು ಹಾಗೂ ಉಪಾಧ್ಯಕ್ಷರನ್ನಾಗಿ ದೆಹಲಿ ಆಂಧ್ರ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಯಾದ ಈಶ್ವರ ಪ್ರಸಾದ್ ಅವರನ್ನು ಆಯ್ಕೆ ಮಾಡಲಾಯಿತು. ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ, ಕೇರಳ ಶಿಕ್ಷಣ ಸಂಸ್ಥೆ, ವಿಕಾಸಪುರಿಯ ಸದಸ್ಯ ಎಂ.ಪಿ. ರಾಜಶೇಖರ, ರೈಸೀನಾ ಬೆಂಗಾಲಿ ಶಿಕ್ಷಣ ಸಂಸ್ಥೆ ಉಪಾಧ್ಯಕ್ಷ ಪ್ರಣಬ್ ಸಾಸ್ಮಲ್ ಅವರು ಸದಸ್ಯರಾಗಿ, ಆಂಧ್ರ ಶಿಕ್ಷಣ ಸಂಸ್ಥೆಯ ಸಿ. ಭೀಮಣ್ಣ ಅವರು ಸಂಯೋಜಕರಾಗಿ ಆಯ್ಕೆಯಾದರು. ಈ ಸಭೆಯಲ್ಲಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಎಂ.ಎಸ್. ಶಶಿಕುಮಾರ್, ಉಪಾಧ್ಯಕ್ಷ ಎನ್.ಪಿ. ಚಂದ್ರಶೇಖರ ಉಪಸ್ಥಿತರಿದ್ದರು.

**ಅರವಿಂದ ಬಿಜೈ**

# ‘ಭಾರತೀಯ ಭಾಷೆಗಳು ಮತ್ತು ವಚನಗಳು’ ಕುರಿತ ಉಪನ್ಯಾಸ

ನಮ್ಮ ಕನ್ನಡ ವಚನಗಳ ಸಂದೇಶ ಭೂತ, ವರ್ತಮಾನ, ಭವಿಷ್ಯತ್ತಿನಲ್ಲೂ ಸದಾ ಹೀಗೆ ಜೀವಂತವಾಗಿರುತ್ತದೆ ಎಂದು ಕನ್ನಡ ವಚನಗಳ ಪಂಜಾಬಿ ಅನುವಾದಕ ಪಂಡಿತರಾವ್ ಧರೇಣವರ್ ಅವರು ಅಭಿಪ್ರಾಯಪಟ್ಟರು.

ಚಂಡೀಗಡ ಸರ್ಕಾರಿ ಸ್ನಾತಕೋತ್ತರ ಪದವಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕರು ಮತ್ತು ಕನ್ನಡ ವಚನಗಳ ಪಂಜಾಬಿ ಅನುವಾದಕ ಪಂಡಿತರಾವ್ ಧರೇಣವರ್ ಅವರು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ದೆಹಲಿ ಪ್ರದೇಶ ಘಟಕ ದಿನಾಂಕ 27.2.2021 ರಂದು ಹಮ್ಮಿಕೊಂಡಿದ್ದ “ಭಾರತೀಯ ಭಾಷೆಗಳು ಮತ್ತು ವಚನಗಳು” ಎಂಬ ವಿಷಯ ಕುರಿತ ಆನ್‌ಲೈನ್ ಉಪನ್ಯಾಸ ಮಾಲಿಕೆ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಅವರು ವಚನ ಸಾಹಿತ್ಯ ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡಿದೆ ಹಾಗೂ ಕನ್ನಡ ಸಾರಸ್ವತ ಲೋಕಕ್ಕೆ ತನ್ನದೇ ಬಹುಮುಖ್ಯ ಕೊಡುಗೆಯನ್ನು ನೀಡಿ ಕನ್ನಡ ಭಾಷೆಯ ಬೆಳವಣಿಗೆಗೆ ಸಾಕ್ಷಿಯಾಗಿದೆ. 12ನೇಯ ಶತಮಾನದ ಶರಣರ ಕೊಡುಗೆಯಾದ ಶರಣ ಸಾಹಿತ್ಯವನ್ನು ಉಳಿಸಿ ಬೆಳೆಸುವ ಜವಾಬ್ದಾರಿ ನಮ್ಮ ಇಂದಿನ ಪೀಳಿಗೆಯ ಕರ್ತವ್ಯವಾಗಿದೆ.

ವಚನ ಸಾಹಿತ್ಯದ ಸಂದೇಶ ಭೂತ ವರ್ತಮಾನ ಭವಿಷ್ಯತ್ ಹೀಗೆ ಸದಾಕಾಲವೂ ಮಹತ್ವ ಹೊಂದಿರುತ್ತದೆ. ನಮ್ಮ ವಚನಗಳ ಮಹತ್ವ ಕೇವಲ ಕನ್ನಡಕ್ಕೆ ಸೀಮಿತವಾಗಿರದೆ ಪಂಜಾಬಿನ ಪಟಿಯಾಲಾ ವಿಶ್ವವಿದ್ಯಾಲಯವೂ ಕೂಡ ಪಂಜಾಬಿ ಭಾಷೆಯಲ್ಲಿ ವಚನಗಳ ಬಗೆಗೆ ವಿದ್ಯಾರ್ಥಿಗಳಿಗೆ ಪಿ.ಹೆಚ್.ಡಿ ಅಧ್ಯಯನ ಮತ್ತು ಉನ್ನತ ಸಂಶೋಧನೆ ಮಾಡಲು ಅನುವು ಮಾಡಿಕೊಟ್ಟಿದೆ, ಹನ್ನೆರಡನೆಯ ಶತಮಾನದ ಕನ್ನಡ ವಚನ ಸಾಹಿತ್ಯದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಆಯೋಜಿಸಿದ ಪರಿಷತ್ತಿನ ಎಲ್ಲ ಸಂಘಟಕರನ್ನು ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ವಿಚಾರಮಂಡನೆ ಮಾಡಿದ ಚಿಂತಕಿ, ಉಡುಪಿ ಜಿಲ್ಲೆಯ ಎಂಜಿಎಂ ಕಾಲೇಜಿನ ಉಪನ್ಯಾಸಕರು ಹಾಗೂ ಕನ್ನಡ ವಚನಗಳ ತುಳು ಭಾಷಾ ಅನುವಾದಕರೂ ಆದ ಶ್ರೀಮತಿ ಡಾ. ಕಾತ್ಯಾಯಿನಿ ಕುಂಜಿಬೆಟ್ಟು ಅವರು ಮಾತನಾಡಿ ಕಾವ್ಯದ ಒಂದು ಮುಖ ಚಂದವಾದರೆ, ಇನ್ನೊಂದು ಮುಖ ನೊಂದವರ ಅಳಲು ತೋಡುವ ಮಾಧ್ಯಮವಾಗಿರುತ್ತದೆ. ಕಾವ್ಯದ ಮೂಲಕ ಸಮಾಜದ ಅಸಮಾನತೆಯನ್ನು ತಿದ್ದುತ್ತಾ ಹೋಗಲು ಸಹಾಯಕವಾಗಿದೆ. ಈಗಿನ ಆಧುನಿಕ ಕಾವ್ಯಗಳ ರೀತಿಯಲ್ಲಿಯೇ ಹನ್ನೆರಡನೆಯ ಶತಮಾನದ ಕಲ್ಯಾಣದ ವಚನ ಕ್ರಾಂತಿ ಮಾನವೀಯ ಮೌಲ್ಯಗಳ ಶೋಧವನ್ನು ನಡೆಸುತ್ತಾ ಬಂದಿವೆ ಎಂದು ಹೇಳಿದ ಅವರು ಸಾಮಾಜಿಕ ಸಮಾನತೆಯ ಅಂಶಗಳು ಇವತ್ತಿಗೂ ಕೂಡ ಪ್ರಾಯೋಗಿಕವಾಗಿ ಅನ್ವಯವಾಗುತ್ತಿವೆ.



ಬಿ.ಬಿ. ಪಾಟೀಲ್



ಡಾ. ಕಾತ್ಯಾಯಿನಿ ಕುಂಜಿಬೆಟ್ಟು



ಪಂಡಿತರಾವ್ ಧರೇಣವರ್

ನಮ್ಮ ವಚನಕಾರರು ಕಾಯಕವೇ ಕೈಲಾಸ ಎಂದು ಕಾಯಕಕ್ಕೆ ಮಹತ್ವ ನೀಡಿದ್ದಾರೆ. ಮನುಷ್ಯನ ಸಂಸ್ಕೃತಿ ಜಂಗಮವಾಗಿದ್ದು ಸದಾ ಜೀವಂತವಾಗಿರುತ್ತದೆ. ಅದು ತಾತ, ತಂದೆ, ಮಗನಿಗೆ ಒಂದು ಪರಂಪರೆಯಿಂದ ಇನ್ನೊಂದು ಪರಂಪರೆಗೆ ಹಂಚುತ್ತಾ ಸಾಗುತ್ತದೆ. ವರ್ಣ ತಾರತಮ್ಯದ ಬಗೆಗೆ ಬಸವಣ್ಣನವರ ತತ್ವ ಮತ್ತು ಆಸೆಯೆಂಬುದು ಮಾಯೆ ಎಂಬ ಆಸೆಯ ಬಗೆಗಿನ ಅಲ್ಲಮಪ್ರಭುಗಳ ತತ್ವಗಳು ನಮ್ಮ ಕಲ್ಪನೆಯನ್ನು ಸಹ  ಮೀರಿ ನಿಂತಿವೆ. ವಚನಕಾರರು ಹೇಳಿದ ಅಹಿಂಸಾಧರ್ಮ ಬಹಳ ಗೌರವಯುತವಾಗಿದೆ. ವಚನಗಳ ಧರ್ಮ ಇವತ್ತಿಗೂ ಸಹ ಬಹಳ ಸ್ಥಿರವಾಗಿ ನಿಂತಿದೆ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆ ನೀಡಿದ್ದ ಸ್ವಾತಂತ್ರ್ಯವನ್ನು, ವಚನಕಾರರು ಹನ್ನೆರಡನೆಯ ಶತಮಾನದಲ್ಲಿಯೇ ನೀಡಿದ್ದರು.

ವಚನಗಳು ವಿಶ್ವದ ಶಾಂತಿಗೆ ಮಹತ್ವವನ್ನು ನೀಡುತ್ತವೆ. ವಚನಗಳು ಇಡೀ ವಿಶ್ವಕ್ಕೆ ಅನುವಾದವಾಗಬೇಕಾಗಿದೆ ಮತ್ತು ಇಂದಿನ ವಿದ್ಯಾರ್ಥಿಗಳಿಗೆ ವಚನಗಳ ಜ್ಞಾನದ ಅವಶ್ಯಕತೆಯಿದ್ದು ಈ ನಿಟ್ಟಿನಲ್ಲಿ ತಾವು ಕೂಡ ತುಳು ಭಾಷೆಗೆ ಕನ್ನಡ ವಚನಗಳನ್ನು ಭಾಷಾಂತರ ಮಾಡಿದ್ದಾಗಿ ಹೇಳಿ ತಾವು ಅನುವಾದಿಸಿದ ವಚನಗಳನ್ನು ವಾಚನ ಮಾಡಿ ತಮ್ಮ ಹರ್ಷವನ್ನು ಹಂಚಿಕೊಂಡರು.

ಮುಖ್ಯ ಅತಿಥಿ ತೆಲಂಗಾಣದ ಜಹಿರಾಬಾದ್ ಲೋಕಸಭಾ ಕ್ಷೇತ್ರದ ಸಂಸದ ಬಿ.ಬಿ. ಪಾಟೀಲ್ ಅವರು ಪಾಲ್ಗೊಂಡು ಕನ್ನಡ ವಚನಗಳ ಬಗೆಗೆ ಅವರಿಗಿರುವ ಆಸಕ್ತಿಯನ್ನು ತೋರಿಸಿದರು.

ವಿಶ್ವವಚನ ಫೌಂಡೇಶನ್ ಸಂಸ್ಥೆಯ ಸಂಸ್ಥಾಪಕ ಡಾ. ವಚನ ಕುಮಾರಸ್ವಾಮಿ ಅವರು ಮಾತನಾಡಿ ವಿವಿಧ ಭೌಗೋಳಿಕ ಸ್ಥಳಗಳಿಂದ ಕನ್ನಡಿಗರು ಮತ್ತು ವಚನ ಪ್ರಿಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು ಒಂದು ಸಂತಸದ ವಿಚಾರ, ಶರಣ ಪರಿಷತ್ತು ಈ ಹಿಂದೆಯೇ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ತನ್ನ ಕಹಳೆಯನ್ನು ಊದಬೇಕಿತ್ತು. ಈಗಿನ ಅಧ್ಯಕ್ಷ ಚಂದ್ರಶೇಖರ್ ಅವರಿಂದ ಇಂದು ಶರಣರ ಜ್ಞಾನ ಹಬ್ಬುತ್ತಿರುವದು ಉತ್ತಮ ಬೆಳವಣಿಗೆ, ಕೊರೊನಾದಂತಹ ಸಾಂಕ್ರಾಮಿಕ ರೋಗದ ನಡುವೆಯೂ ಕೂಡ ನಾವು ಆನ್‌ಲೈನ್ ಮೂಲಕ 21 ಕಾರ್ಯಕ್ರಮ ಹಮ್ಮಿಕೊಂಡು ಬಂದಿದ್ದೇವೆ. ಹಲವು ವಿದ್ವಾಂಸರು ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಚಂದ್ರಶೇಖರ್ ಅವರು ಮಾತನಾಡಿ ಪ್ರತಿ ವರ್ಷ ಫೆಬ್ರವರಿ 21ರಂದು ಮಾತೃಭಾಷಾ ದಿನವನ್ನು ಆಚರಿಸುತ್ತೇವೆ. ಈ ಸವಿನೆನಪಿನಲ್ಲಿ ಹಮ್ಮಿಕೊಳ್ಳಲಾದ ಕಾರ್ಯಕ್ರಮದ ಸದುದ್ದೇಶವನ್ನು ಹೇಳಿದರು. ಮಗುವಿಗೆ ತಾಯಿಯ ಎದೆಹಾಲು ಎಷ್ಟು ಮುಖ್ಯವೋ ಹಾಗೆಯೇ ಮಗುವಿಗೆ ತನ್ನ ಭಾವನೆಗಳನ್ನು ವ್ಯಕ್ತಪಡಿಸಲು, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಉನ್ನತಿ ಹೊಂದಲು ಮಾತೃಭಾಷೆಯು ತಾಯಿಯಷ್ಟೇ ಮುಖ್ಯ ಎಂದು ಹೇಳಿದರು. ವಚನ ಸಾಹಿತ್ಯ ಕನ್ನಡ ಭಾಷೆಗೆ ನೀಡಿದ ಕೊಡುಗೆಗಳನ್ನು ವಿವರಿಸಿದರು. ಹಾಗೂ ಪರಿಷತ್ತಿನ ಕಾರ್ಯಕ್ರಮಗಳ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸಿದ ಎಲ್ಲರಿಗೆ ಕೃತಜ್ಞತೆ ಹೇಳಿದರು.

ಶ್ರೀಮತಿ ಕೆ.ಸಿ. ಆರಾಧನಾ ಮೂರ್ತಿ, ಹೇಮಾಶ್ರೀ ಚಂದ್ರಶೇಖರ್, ಶ್ರೀಮತಿ ಜಮುನಾ ಸಿ. ಮಠದ ಮತ್ತು ಶ್ರೀಮತಿ ಜಯಶ್ರೀ ಬಸವರಾಜ್, ಶ್ರೀಮತಿ ಲಾವಣ್ಯ ಬಸವರಾಜ್, ಶ್ರೀಮತಿ ಮೈಥಿಲಿ ಅತ್ತಾವರ್ ಅವರ ಸುಮಧುರ ಕಂಠದ ವಚನ ಗಾಯನದಲ್ಲಿ ಇಳಿಸಂಜೆಯಲ್ಲಿ ಮೂಡಿಬಂದ ಕಾರ್ಯಕ್ರಮ ವಚನ ಪ್ರಿಯರ ಮೆಚ್ಚುಗೆಗೆ ಪಾತ್ರವಾಯಿತು.

ಶಿವಣ್ಣ ಎಲ್ ಅವರು ಸ್ವಾಗತಿಸಿದರು. ಶಿವಪ್ಪ, ಶ್ರೀಮತಿ ಜಯಶ್ರೀ ಬಸವರಾಜ್, ಈಶ್ವರಲಿಂಗ ಆರೇರಾ ಡಾ. ಗುರುರಾಜ್ ಅವರು ಅತಿಥಿಗಳನ್ನು ಪರಿಚಯಿಸಿದರು. ಶ್ರೀಮತಿ ಮೈಥಿಲಿ ಅತ್ತಾವರ ಕಾರ್ಯಕ್ರಮ ನಿರೂಪಿಸಿದರು.

ಶರಣು ವಿಶ್ವ ವಚನ ಫೌಂಡೇಶನ್ ಸಂಸ್ಥೆಯ ಡಾ. ವಚನ ಕುಮಾರಸ್ವಾಮಿಯವರು ಕಾರ್ಯಕ್ರಮಕ್ಕೆ ತಾಂತ್ರಿಕ ಸಹಯೋಗ ನೀಡಿದರು. ಶ್ರೀಮತಿ ಪಾವನಿ ಭಾರದ್ವಾಜ್ ಅವರು ವಚನಗಾಯನದ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕಾರ್ಯದರ್ಶಿ ಕೆ.ಎಸ್. ಮೂರ್ತಿ ವಂದಿಸಿದರು.

***ಯಲ್ಲಾಲಿಂಗ ಕೊಪ್ಪದ್***

# ನಾಟಕಗಳಲ್ಲಿ ಅವ್ವ ಕುರಿತ ಸಂವಾದ

ತಾಯಿ, ಅವ್ವ, ಅಮ್ಮ, ಮಮ್ಮಿ, ಮದರ್, ಮಾತಾ, ಮಾ... ಆಯಿ... ಅನೇಕ ಹೆಸರಿನಿಂದ ಕರೆದರೂ ಸಹ ಒಳಗಿರುವ ತಾಯ್ತನದ ಕಂಪು ಒಂದೇಯಾಗಿರುತ್ತದೆ. ಭಾಷೆ ಯಾವುದೇ ಇರಲಿ, ದೇಶ ಯಾವುದೇ ಇರಲಿ 'ತಾಯಿ' ಅನ್ನುವ ಪದ ಆರ್ದ್ರ ಭಾವವನ್ನುಂಟು ಮಾಡುತ್ತದೆ. ತಾಯಿಯ ಪದತಳದಲ್ಲಿ ಸ್ವರ್ಗ ಇದೆ ಎಂದು, ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿ ಇಲ್ಲ ಅಂತ ಗಾದೆ ಹೇಳುತ್ತದೆ. ನಾವು ತಾಯಿಯ ಕರುಳ ಬಳ್ಳಿಗಳು, ಅವಳ ಕರುಳ ಕುಡಿಗಳು, ಅವಳು ಹೆತ್ತು, ಹೊತ್ತು ಸಾಕಿ ಸಲುಹಿದ ಕಂದಮ್ಮಗಳು ಎಂದು ಸಾಹಿತಿ ಹಾಗೂ ನಿವೃತ್ತ ಉಪನ್ಯಾಸಕ ಚಂದ್ರಶೇಖರ ವಸ್ತ್ರದ ಅವರು ಹೇಳಿದರು. ಅವರು ದಿನಾಂಕ 21.02.2021 ರಂದು ನವದೆಹಲಿಯ 'ದಿನಕರ' ಆಯೋಜಿಸಿದ್ದ 'ನಾಟಕಗಳಲ್ಲಿ ಅವ್ವ' ಸಂವಾದದಲ್ಲಿ ಮಾತನಾಡುತ್ತಿದ್ದರು. ಎಲ್ಲ ನಾಟಕಗಳಲ್ಲೂ 'ಅವ್ವ' ಇದ್ದಾಳೆ. ಬೊಳ್ಳುಗಟ್ಟಿ ನಾಟಕದ ಭಾಗೀರಥಮ್ಮ, ಅಮ್ಮಾವ್ರ ಗಂಡ ನಾಟಕದ ಕಮಲ ಎಲ್ಲರೂ ಪರೋಪಕಾರಕ್ಕಾಗಿಯೇ ಈ ಜನ್ಮವಿದೆ ಎಂದು ಭಾವಿಸಿದವರು, ಅದಕ್ಕೆ ತಕ್ಕ ಹಾಗೆ ತಾವು ರೂಪುಗೊಂಡವರು ತಮ್ಮ ಮಕ್ಕಳನ್ನು ಬೆಳೆಸಿದವರು ಅಷ್ಟೆ ಅಲ್ಲ, ತಾವು ಸಾಕಿ ಬೆಳೆಸದಿದ್ದರೂ ಅನ್ಯರ ಮಕ್ಕಳನ್ನು ತನ್ನ ಮಕ್ಕಳೆಂದೇ ತಿಳಿದು ಸಾಕಿ–ಸಲುಹಿ ಅವರನ್ನು ಸುಸಂಸ್ಕೃತರನ್ನಾಗಿಸುವ ತಾಯಿಯನ್ನೇ ಕೇಂದ್ರವಾಗಿರಿಸಿಕೊಂಡ ಅನೇಕ ನಾಟಕದಲ್ಲಿ ಕರುಣಾಮಯಿ 'ತಾಯಿ'ಯನ್ನು ನಾವು ಕಾಣುತ್ತೇವೆ ಎಂದು ವಸ್ತ್ರದ ಹೇಳಿದರು.

ಮರಾಠಿಯ 'ಆಯಿ ರಿಟೈರ್ ಹೋಗಯಿ' ಎನ್ನುವ ನಾಟಕ, ಐರೀಸ್ ನಾಟಕ ಜಗತ್ಪ್ರಸಿದ್ಧ ನಾಟಕ. ವೃತ್ತಿ ರಂಗಭೂಮಿ ಹಾಗೂ ಹವ್ಯಾಸಿ ರಂಗಭೂಮಿಯಲ್ಲಿ 'ಅವ್ವ'ಳನ್ನು ಕುರಿತ ಅನೇಕ ನಾಟಕಗಳಿವೆ ಎಂದರು.

ನಾಟಕಕಾರ ಎಚ್.ಎನ್. ಹೂಗಾರ ರಚಿತ 'ಹಡೆದವ್ವ' ನಾಟಕ ವೃತ್ತಿ ರಂಗಭೂಮಿಯ ಅತಿ ಹೆಚ್ಚು ಪ್ರದರ್ಶನ ಕಂಡ ನಾಟಕವಾಗಿದೆ. ನಿಂದೆ, ಮಾನಸಿಕ ಹಿಂಸೆ ಎಲ್ಲವನ್ನು ಸಹಿಸಿಕೊಂಡು ತಾಯ್ತನ ಮೆರೆದ ಕಥಾ ವಸ್ತುವುಳ್ಳ ನಾಟಕ 'ಹಡೆದವ್ವ'. ಅನಾಥ ಮಗುವನ್ನು ತನ್ನದಾಗಿಸಿಕೊಂಡು ಅದರ ಲಾಲನೆ–ಪಾಲನೆ ಪೋಷಣೆ ಮಾಡುವ 'ಲಾಲಿ ಮಾತೃತ್ವದ ಮೈವೆತ್ತಂತಿದ್ದಾಳೆ. ಮಗುವಿನ ಪ್ರಾಣಕ್ಕೆ ಅಪಾಯ ಒದಗಿದಾಗ ಜ್ವಾಲಾಮುಖಿಯಾಗಿ ಸಿಡಿದು ಮಗುವನ್ನು ರಕ್ಷಿಸುತ್ತಾಳೆ. 'ತಾಯ್ತನ'ದ ಕುರಿತ 'ಹಡೆದವ್ವ' ನಾಟಕ ಹೃದ್ಯವಾಗಿ ಬಿಂಬಿಸುತ್ತದೆ ಎಂದು ವಸ್ತ್ರದ ಅವರು ಹೇಳಿದರು.

ಸುಪ್ರಸಿದ್ಧ ನಾಟಕಕಾರ 'ಬರ್ಟೋಲ್ಟ್ ಬ್ರೆಕ್ಟನ್'ನ 'ಕಕೇಶಿಯನ್ ಚಾಕ್ ಸರ್ಕಲ್'. ಈ ನಾಟಕದ ಮೂಲ ಕಥೆ ಚೀನಾ ದೇಶದ್ದು. ಆ ಕಥೆಯಲ್ಲಿ ಒಂದು ಮಗುವಿಗೆ ನಿಜವಾದ ತಾಯಿ ಯಾರು ಎಂಬ ಜಟಿಲ ಸಮಸ್ಯೆ ಬಿಡಿಸಲೆಂದು ಚಾಕ್ ಸರ್ಕಲ್ ಬರೆದು, ಅದರೊಳಗೆ ಮಗುವನ್ನು



ಚಂದ್ರಶೇಖರ ವಸ್ತ್ರದ

ನಿಲ್ಲಿಸಿ, ಮಗು ತಮ್ಮದೆಂದು ಜಗಳವಾಡುತ್ತಿದ್ದ ಇಬ್ಬರು ತಾಯಂದರಿಗೆ ಮಗುವಿನ ಎಳೆಯಲು ತಿಳಿಸಿ, ಯಾರೂ ಜೋರಾಗಿ ಎಳೆಯುತ್ತಾರೆ ಮಗು ಅವರಿಗೆ ಸೇರಿದ್ದೆಂದು, ಆ ಮಗುವಿನ ತಾಯಿ ತನ್ನ ಮಗುವಿಗೆಲ್ಲಿ ನೋವಾಗುತ್ತದೆಂದು ತಿಳಿದು ಹಿಂದೆ ಸರಿಯುತ್ತಾಳೆ.

ಆದರೆ ಬ್ರೆಕ್ಟ್ ಈ ಕಥೆಯನ್ನು ಬೇರೊಂದು ರೀತಿಯಲ್ಲಿ ನಾಟಕವಾಗಿಸಿದ. ಕಕೇಶಿಯನ್ ನಾಟಕದಲ್ಲಿ ಬ್ರೆಕ್ಟ್ ಸಲುಹುವವಳು ತಾಯಿ ಎಂಬುದನ್ನು ನಿರೂಪಿಸುತ್ತಾನೆ. ಬ್ರೆಕ್ಟನ ಈ ನಾಟಕವನ್ನು ನಾಟಕಕಾರ ಗೋಪಾಲ ವಾಜಪೇಯಿ ಅವರು ಅದ್ಭುತವಾಗಿ ರಚಿಸಿದರು. ರಾಣಿ ಛಾಯಾವತಿ ತನ್ನ ಒಡಲ ಕುಡಿಯನ್ನು ಬಿಟ್ಟು ಹೋಗುತ್ತಾಳೆ. ತಬ್ಬಲಿಯಾದ ಆ ಮಗುವನ್ನು ರಕ್ಷಿಸಿದವಳು 'ಮಲ್ಲಿ'. ಹಸಿವೆ, ನಿದ್ರೆ–ನೀರಡಿಕೆಗಳನ್ನು ಸಹಿಸಿ, ಕಷ್ಟ ಅನುಭವಿಸಿ, ತನ್ನ ಪ್ರಾಣ ಲೆಕ್ಕಿಸದೇ ಆ ಮಗುವನ್ನು ರಕ್ಷಿಸಿದ ಮಲ್ಲಿ ಮಗುವನ್ನು ಕಾಪಾಡುತ್ತಾಳೆ. ನಾಟಕದ ಕೊನೆಯಲ್ಲಿ ರಾಣಿ ಛಾಯಾವತಿ ಮಗು ತನ್ನದೆಂದು ಹೇಳಿ, ನ್ಯಾಯಾಲಯದ ಮೊರೆ ಹೋಗುತ್ತಾಳೆ, ನ್ಯಾಯಾಧೀಶರು ವೃತ್ತ ಬರೆದು ಮಗು ನಿಲ್ಲಿಸಿ, ಜೋರಾಗಿ ಎಳೆಯಲು ಹೇಳುತ್ತಾರೆ. ನೋವಾಗಿ ಮಗು ಅಳುತ್ತದೆ ಮಲ್ಲಿ 'ಈ ಹುಡುಗನ್ನ ನಾ ಸಾಕಿ ಸಲುಹಿದೆ. ಹೂವಿನಂಗೆ ಬೆಳೆಸಿದೆ. ಈಗ ಹಿಗ್ಗಾ–ಮುಗ್ಗಾ ಜಗ್ಗಾಡಿ ಹೂವಿನ ಪಕಳಿ ಕಿತ್ತೂ... ಮನಸ್ಸಿಲ್ಲ ನನಗೆ, ಅವನ ಉಗುರಿಗೆ ಧಕ್ಕ್ಯಾದ್ರೂ ನನ ಜೀವ ಚುರ್ರಂತ್ಯೆತಿ... ಕಳ್ಳ ಮರಗತ್ಯೆತಿ... ಇಲ್ಲಾ ನಾ ಎಳ್ಯಾಕ ತಯಾರಿಲ್ಲ' ಎಂದು ಹಿಂದೆ ಸರಿಯುತ್ತಾಳೆ. ಇದನ್ನು ನೋಡಿದ ನ್ಯಾಯಾಧೀಶರು ಹಡೆಯುವುದಷ್ಟೆ ತಾಯಿಯಾದಾಕಿನ ಕೆಲಸವಲ್ಲ. 'ಅದಕಿನಾ ಮುಖ್ಯ ಅಂದ್ರ ಮಮತಾದಿಂದ, ಮನುಷ್ಯತ್ವದಿಂದ ಕೂಸಿನ್ನ ಸಾಕೂದು' ಎಂದು ಹೇಳಿ ಮಗುವನ್ನು 'ಮಲ್ಲಿ'ಗೆ ಒಪ್ಪಿಸಬೇಕೆಂಬ ನಿರ್ಣಯಕ್ಕೆ ಬರುತ್ತಾರೆ. ಹೃದಯವಂತಿಕೆಗೆ, ತಾಯ್ತನಕ್ಕೆ ಗೆಲವು ದೊರೆಯುತ್ತದೆ ಎಂದು ಸಂಭಾಷಣೆ ಸಹಿತ ವಸ್ತ್ರದ ವಿವರಿಸಿದರು.

ಪಿ. ಲಂಕೇಶ ಅವರ ಸಣ್ಣ ಕಥೆಯನ್ನಾಧರಿಸಿದ ಡಾ.ಬಸವರಾಜ ಸಾದರ ಅವರು ಬರೆದ 'ರೊಟ್ಟಿ' ಬಾನುಲಿ ರೂಪಕ ತಾಯ್ತನದ ಇನ್ನೊಂದು ಮುಖವನ್ನು ಅನಾವರಣಗೊಳಿಸುತ್ತದೆ. ಮ್ಯಾಕ್ಸಿಂ ಗಾರ್ಕಿಯ 'ತಾಯಿ' ಕಾದಂಬರಿಯನ್ನು ನೆನಪಿಸುವ 'ರೊಟ್ಟಿ'. ಮಗಳ ಬಾಣಂತನ ಮುಗಿಸಿಕೊಂಡು ಊರಿಗೆ ಹೊರಡುವ ತಾಯಿ, ರೈಲು ನಿಲ್ದಾಣದಲ್ಲಿ ತನ್ನ ರೊಟ್ಟಿಯನ್ನು ಕಸಿದುಕೊಂಡ ಅಸಹಾಯಕ ಕಾರ್ಮಿಕನಿಗೆ ತಾಯಿಯಾಗಿ ನಿಲ್ಲುವುದಲ್ಲದೇ, ಸಮಸ್ತರ ತಾಯಿಯಾಗುತ್ತಾಳೆ. 'ತಾಯಿ' ಮಕ್ಕಳ ವಿಷಯದಲ್ಲಿ ನಗುಮೊಗದ ಚಂದ್ರಮುಖಿಯೂ ಆಗಬಲ್ಲಳು, ಮಕ್ಕಳಿಗೆ ಆಪತ್ತು ಎದುರಾದಾಗ ರೌದ್ರವತಾರ ತಾಳಬಲ್ಲಳು ಎಂಬುದು ರೂಪಕದಲ್ಲಿ ಚಿತ್ರಿತ ವಿಷಯ ವಸ್ತುವಾಗಿದೆ ಎಂದು ವಸ್ತ್ರದ ಹೇಳಿದರು.

ವೃತ್ತಿ ರಂಗಭೂಮಿಯ ಅಗ್ರಗಣ್ಯ ನಾಟಕಕಾರಲ್ಲಿ ಪಿ.ಬಿ ಧುತ್ತರಗಿ ಬಹು ದೊಡ್ಡ ಹೆಸರು. ಇವರು ರಚಿಸಿದ 'ತಾಯಿಯ ಕರುಳು' ನಾಟಕದಲ್ಲಿ ಜನಿಸಿದ ಮಕ್ಕಳು ಕೆಟ್ಟವರೇ ಇರಲಿ, ಒಳ್ಳೆಯವರೇ ಇರಲಿ, ತಾಯಿ ಮಾತ್ರ ಈರ್ವರ ಪಾಲಿಗೆ 'ಮಮತೆಯ ಸಾಕಾರಮೂರ್ತಿ, ಸಹನೆಯ ಕಡಲು' ಎಂಬುದು ಈ ನಾಟಕದ ತಿರುಳು.

ಕೆಟ್ಟ ಮಕ್ಕಳು ಹುಟ್ಟಿದರೂ ಹುಟ್ಟಬಹುದು. ಆದರೆ ಕೆಟ್ಟ ತಾಯಿ ಮಾತ್ರ ಇರುವುದಿಲ್ಲ ಎಂಬುದು ಇತ್ತೀಚೆಗೆ ಅಪವಾದವಾಗಿದೆ ಎಂದು ವಸ್ತ್ರದ ಕಳವಳ ವ್ಯಕ್ತಪಡಿಸಿದರು.

ಪಿ. ಲಂಕೇಶ ಅವರ ಆತ್ಮಕಥೆ 'ಹುಳಿಮಾವಿನ ಮರ' ಹಾಗೂ ಪ್ರಸಿದ್ಧ ಕವಿತೆ 'ಅವ್ವ' ಪದ್ಮಿನಿ ನಾಗರಾಜ ಅವರು ಕ್ರೋಢೀಕರಿಸಿ, ಬಹು ಸೊಗಸಾದ 'ಅವ್ವ' ನಾಟಕ ರಚಿಸಿದ್ದಾರೆ ಎಂದು ವಸ್ತ್ರದ ಹೇಳಿದರು.

ದೆಹಲಿ ತಾಂತ್ರಿಕ ಶಿಕ್ಷಣ ಮಂಡಳಿಯ ತರಬೇತಿ ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆಯ ನಿಯಂತ್ರಕರೂ ಆದ ಲೇಖಕ, ರಂಗಕರ್ಮಿ ಡಾ. ಎಸ್.ಎಲ್. ಭಂಡಾರ್ಕರ್ ಅವರು ಸಂವಾದ ನಿರ್ವಹಿಸಿದರು.

ಹಿರಿಯ ರಂಗಕರ್ಮಿ ಶಿವಾನಂದ ಇಂಗಳೇಶ್ವರ ಕಾರ್ಯಕ್ರಮದ ರೂಪುರೇಷೆ ಸಿದ್ಧಪಡಿಸಿ ಸಂಯೋಜಿಸಿದರು. ಮೌಥ್ ಆರ್ಗನ್ ಹಾಗೂ ಗೀಟಾರ್ ವಾದನದ ಮೂಲಕ ತಾಯಿಯ ಕುರಿತ ಹಾಡನ್ನು ಶಿವಕುಮಾರ ಭಜಂತ್ರಿ ಅವರು ಪ್ರಸ್ತುತಪಡಿಸುವ ಮೂಲಕ ಕಾರ್ಯಕ್ರಮ ಪ್ರಾರಂಭವಾಯಿತು. ಸಿ. ಬಸಲಿಂಗಯ್ಯ ಅವರ ನಿರ್ದೇಶನ ಹಾಗೂ ಸಂಗೀತ ಸಂಯೋಜನೆ ಇರುವ ಗೋಪಾಲ ವಾಜಪೇಯಿ ಅವರ 'ಧರ್ಮಪುರಿಯ ಶ್ವೇತ ವೃತ್ತ' ನಾಟಕದ ರಂಗ ಗೀತೆಯನ್ನು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕನ್ನಡ ಶಿಕ್ಷಕ ಅರವಿಂದ ಬಿಜ್ಜೆ, ದೆಹಲಿ ಕನ್ನಡಿಗರಾದ ರಾಮಚಂದ್ರ ಉಭಾಳೆ ಅವರ ಪುತ್ರ ಕುಮಾರ್ ಅಭಿಷೇಕ ಉಭಾಳೆ, ಪುತ್ರಿ ಕುಮಾರಿ ನಂದಿತಾ ಉಭಾಳೆ ಸುಂದರವಾಗಿ ಪ್ರಸ್ತುಪಡಿಸಿದರು.

ಟಿ.ಎಸ್. ರಮೇಶ್ ಅವರು ವಂದಿಸಿದರು. ಕಾರ್ಯಕ್ರಮದಲ್ಲಿ ಡಾ. ರಾಮಕೃಷ್ಣ ಮರಾಠೆ, ವೈ.ಡಿ. ಬದಾಮಿ ಜೊತೆಗಿದ್ದರು. ಟಿ.ಎಸ್. ರಮೇಶ ತಾಂತ್ರಿಕ ಸಹಕಾರ ನೀಡಿದರು.

***ಸಂತೋಷ ಉಪಾಧ್ಯಾಯ***

# ಕನ್ನಡ ರಂಗಭೂಮಿ ಹಾಗೂ ಗಾಂಧಿ ಕುರಿತ ಸಂವಾದ

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ ಎಂದಾಕ್ಷಣ ಸತ್ಯ, ನಿಷ್ಠೆ, ಶಿಸ್ತು ಸಂಯಮ ಅನೇಕ ಆದರ್ಶದಾಯಕ ಪ್ರೇರಣೆಗಳ ವ್ಯಕ್ತಿತ್ವದ ಚಿತ್ರವೇ ನಮ್ಮ ಕಣ್ಣು ಮುಂದೆ ಸುಳಿದಾಡುತ್ತದೆ. ಇಡೀ ಜಗತ್ತಿಗೆ ಮೌಲ್ಯಗಳನ್ನು ಕೊಟ್ಟಂತಹ ಸತ್ಯ,ನಿಷ್ಠೆ ಪ್ರಾಮಾಣಿಕತೆಗೆ ತನ್ನದೇಯಾದ ನಿಲುವುಗಳನ್ನು ತೆಗೆದುಕೊಂಡಂತಹ, ತನ್ನ ಮೇಲೆಯೇ ತಾನೇ ಪ್ರಯೋಗಕ್ಕೊಳಗೊಳ್ಳುವ ಹೊಸ ಹೊಸ ಮಾನವೀಯ ವಿಚಾರಗಳಿಗೆ ಬೆಳಕಾಗಿಸಿದ ಮಹಾತ್ಮ ಎಂದು ನಾಟಕಕಾರ, ಕಲಾವಿದ ಹಾಗೂ ಬೆಳಗಾವಿಯ ಭಾವುರಾವ ಕಾಕತ್ಕರ್ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ. ಡಿ.ಎಸ್. ಚೌಗಲೆ ಅವರು ಹೇಳಿದರು. ದಿನಾಂಕ 29.01.2021 ರಂದು ನವದೆಹಲಿಯ 'ದಿನಕರ' ಆಯೋಜಿಸಿದ್ದ ಜೂಮ್ ಮೀಟಿಂಗನ 17ನೇ ಮಾಲಿಕೆಯ 'ಕನ್ನಡ ರಂಗಭೂಮಿ ಹಾಗೂ ಗಾಂಧಿ' ವಿಷಯದ ಸಂವಾದದಲ್ಲಿ ಸಂಪನ್ಮೂಲ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಿದ್ದರು.

ಗಾಂಧೀಜಿಯವರು ತಮ್ಮನ್ನು ತಾವು ಪ್ರಯೋಗಕ್ಕೊಳಪಡಿಸಿಕೊಳ್ಳುತ್ತಾ, ಬದಲಾಗುತ್ತಾ ಹೋಗುತ್ತಾರೆ. ಗಾಂಧೀಜಿ-ಅಂಬೇಡ್ಕರ್ ಅವರು ವರ್ಣಭೇದ, ದೌರ್ಜನ್ಯಗಳು, ಅವಮಾನದಿಂದಲೇ ತಮ್ಮ ಬದುಕನ್ನು ಬೇರೆಯದೇ ರೀತಿಯಲ್ಲಿಯೇ ಪ್ರಪಂಚಕ್ಕೆ ಕೊಡುಗೆಯಾಗಿಸಿದ್ದಾರೆ. ಕಸ್ತೂರಬಾ ನಾಟಕ ರಚನೆಯ ಸಂದರ್ಭ ಬೇರೆ-ಬೇರೆ ಪುಸ್ತಕಗಳನ್ನು ಪರಾಮರ್ಶನೆ ಮಾಡುವಾಗ ಬಾಪೂವಿನ ಬಗ್ಗೆ ಅನೇಕ ಮಾಹಿತಿಗಳು ದೊರಕಿದವು ಎಂದು ಅವರು ಹೇಳಿದರು.

ಮನುಷ್ಯ ಕುಲದ ಮೇಲೆ ತನ್ನ ವಿಚಾರಗಳಿಂದ ಪ್ರಭಾವಿಸುವ ಗುಣ ಗಾಂಧೀಜಿಯವರಿಗಿತ್ತು. ಗ್ರಾಮ ಸ್ವರಾಜ್ಯದಂತಹ ಕೃತಿಗಳನ್ನು ಹಾಗೂ ಅವರ ಆತ್ಮಕಥೆಗಳನ್ನು ಅಭ್ಯಸಿಸಿದಾಗ ಅವರ ಸರಳ ಜೀವನದ ವಿಚಾರಗಳು ಸುಸ್ಪಷ್ಟವಾಗುತ್ತವೆ ಎಂದರು.


ಸ್ವಾತಂತ್ರ್ಯ ಚಳುವಳಿ ಕಾಲ ರಂಗಭೂಮಿ, ಪ್ರದರ್ಶನ ಕಲೆಗಳಲ್ಲಿ ನೇರವಾಗಿ ಗಾಂಧೀಜಿಯವರ ಚರಿತ್ರೆ ಬೇರೆ ಯಾವುದೇ ವಿಷಯದ ಭಾಗ ತೆಗೆದುಕೊಂಡು ನಾಟಕಕ್ಕೆ ಪ್ರದರ್ಶನಕ್ಕೆ ಪ್ರಯತ್ನಿಸಲಿಲ್ಲ. ಚಳುವಳಿಗೆ ಬೇರೆ-ಬೇರೆ ಮುಖಗಳಿದ್ದವು ಅವುಗಳನ್ನು ಈ ಪ್ರದರ್ಶನ ಕಲೆಗಳು ಸ್ವೀಕಾರ ಮಾಡಿದ್ದವು. ಕನ್ನಡ ರಂಗಭೂಮಿಯಲ್ಲಿ ಪಾರಿಜಾತ, ಸಣ್ಣಾಟ, ಸಂಗ್ಯಾ-ಬಾಳ್ಯಾ, ರಾಧಾನಾಟ ಹಾಗೂ ಕಂಪನಿ ನಾಟಕಗಳು ಈ ಎಲ್ಲ ಪ್ರಕಾರಗಳನ್ನು ಬಳಸಿಕೊಂಡು ಬ್ರಿಟೀಷ್ ಅಧಿಕಾರಿಗಳಿಗೆ ತಿಳಿಯದಂತೆ, ಗಾಂಧೀಜಿಯವರು ನಡೆಸುವ ಚಳುವಳಿ, ಅವರ ವಿಚಾರಗಳನ್ನು, ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಂಬಂಧಪಡುವಂತಹ ಆಲೋಚನೆಗಳು, ಚಿಂತನೆಗಳು ಜನರಿಗೆ ತಲುಪಬೇಕು ಎಂಬ ನಿಟ್ಟಿನಲ್ಲಿ ಅವರು ಕಾರ್ಯ ನಿರ್ವಹಿಸುತ್ತಿದ್ದರು. ಕೀರ್ತನೆ ಕೂಡ ಪ್ರದರ್ಶನ ಕಲೆ, ಆಧ್ಯಾತ್ಮದ ವಿವರಗಳ ಜೊತೆಗೆ ಪ್ರಾಪಂಚಿಕ ವಿಷಯಗಳ ಸ್ವಾರಸ್ಯಕರ ಕಥೆಗಳನ್ನು ಹೇಳುತ್ತಿರುತ್ತಾರೆ. ಗಾಂಧೀಜಿಯವರ ಸ್ವಾತಂತ್ರ್ಯ ಸಂಗ್ರಾಮದ ಹೋರಾಟ ಸಂಘರ್ಷದ ಅನೇಕ ವಿಚಾರಗಳನ್ನು ಕೀರ್ತನೆಗಳ ಮೂಲಕ, ಜಾನಪದ ಪ್ರದರ್ಶನಗಳ ಪ್ರಯೋಗಗಳ ಮೂಲಕ ಪಸರಿಸುವ ಪ್ರಯತ್ನವಾಗುತ್ತಿತ್ತು ಎಂದರು. ಸ್ವಾತಂತ್ರ್ಯ ಪೂರ್ವದಲ್ಲಿ ಕನ್ನಡ ವೃತ್ತಿ ರಂಗಭೂಮಿ ನಾಟಕ ಕಂಪನಿಗಳಿದ್ದವು. ಚಲೇಜಾವ್ ಚಳುವಳಿ, ಉಪ್ಪಿನ ಸತ್ಯಾಗ್ರಹ ಹಾಗೂ ಕಾಲಕ್ಕನುಗುಣವಾಗಿ ಗಾಂಧೀಜಿಯವರು ಕೊಡುವಂತಹ ಸಂದೇಶಗಳನ್ನು ಪ್ರೇಕ್ಷಕರ ಮೂಲಕ ಜನ ಸಮುದಾಯದಲ್ಲಿ ರವಾನಿಸುವ ಕೆಲಸ ಕಂಪನಿ ನಾಟಕಗಳು ನಿರ್ವಹಿಸುತ್ತಿದ್ದವು. ಕಿತ್ತೂರು ಚೆನ್ನಮ್ಮ ನಾಟಕದ ಪ್ರಸಂಗಗಳಲ್ಲಿ ಪ್ರಾಸಂಗಿಕವಾಗಿ ಗಾಂಧೀಜಿ ವಿಚಾರಧಾರೆಗಳನ್ನು ಪ್ರಸ್ತಾಪಿಸುತ್ತಿದ್ದರು. 'ನರಗುಂದದ ಬಂಡಾಯ' ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿಯವರ ಚಿಂತನೆಗಳು, ಸಂದೇಶಗಳು ಜನರಿಗೆ ತಲುಪಿಸುವ ಕೆಲಸ ಮಾಡುತ್ತಿದ್ದರು. ರೂಪಕಗಳಲ್ಲಿ ಒಡಪು-ಒಗಟುಗಳಲ್ಲಿ ನೇರವಾಗಿಯೂ ಹೇಳುತ್ತಿದ್ದರು. ಗರುಡ ಸದಾಶಿವರಾಯರ ನಾಟಕ 'ಅಕ್ಷಯಾಂಬರ'ದಲ್ಲಿ ಈ ಕುರಿತು ಉಲ್ಲೇಖವಿದೆ ಎಂದು ಡಾ. ಚೌಗಲೆ ಅವರು ಹೇಳಿದರು.

ಕನ್ನಡ ಜನಪದ ರಂಗಭೂಮಿಯಿಂದ ಪ್ರೇರಣೆ ಪಡೆದ ಮರಾಠಿಯ 'ಸೀತಾಸ್ವಯಂವರ' ಹೀಗೆ ರಂಗಭೂಮಿಯ ಸಾಕಷ್ಟು ಕೊಡುಕೊಳ್ಳುವಿಕೆಯಾಗಿದೆ. ಮರಾಠಿ ರಂಗಭೂಮಿಯಲ್ಲಿ ಗಾಂಧೀಜಿ ಕುರಿತಾದಂತಹ ಹಲವಾರು ನಾಟಕಗಳಿದ್ದವು ಎಂದವರು ಹೇಳಿದರು.

ಮೂಲ ಗುಜರಾತಿ ಕಾದಂಬರಿ ದಿನಕರ ಜೋಶಿ ಮರಾಠಿ ನಾಟಕ ರೂಪಾಂತರ 'ಅಜಿತ್ ದಳವಿ', ಸಿ. ಬಸವಲಿಂಗಯ್ಯ ನಿರ್ದೇಶನದ ಕನ್ನಡಕ್ಕೆ ಅನುವಾದಿಸಿರುವ ಗಾಂಧಿ ವರ್ಸಸ್ ಗಾಂಧಿ ನಾಟಕ ಅಲೌಖಿಕ ಮತ್ತು ಲೌಖಿಕ ಮೌಲ್ಯಗಳ ಸಂಘರ್ಷವೇ ನಾಟಕದ ಕೇಂದ್ರ ವಿಷಯ ಎಂದರು. ಸಮಕಾಲೀನ ಸಾಮಾಜಿಕ, ಆರ್ಥಿಕ ನೀತಿಗಳಿಗೆ ಗಾಂಧೀಜಿಯವರ ಚಿಂತನೆಗಳು ಎಂದಿಗಿಂತಲೂ ಇಂದು ಪ್ರಸ್ತುತವೆನಿಸುತ್ತವೆ ಎಂದು ಡಾ. ಡಿ.ಎಸ್. ಚೌಗಲೆ ಹೇಳಿದರು. ತಾವೇ ಕನ್ನಡಕ್ಕೆ ಅನುವಾದಿಸಿರುವ ಗಾಂಧಿ ವರ್ಸಸ್ ಗಾಂಧಿ ನಾಟಕ ಜನಮೆಚ್ಚುಗೆ ಪಡೆದಿರುವುದರ ಬಗ್ಗೆ ಹೆಮ್ಮೆ ಪಟ್ಟರು.

ಡಾ. ಚೌಗಲೆ ಕನ್ನಡಕ್ಕೆ ಅನುವಾದಿಸಿರುವ 'ಗಾಂಧಿ-ಅಂಬೇಡ್ಕರ್' ನಾಟಕದ ಮೂಲ ಕರ್ತೃ ಪ್ರೇಮಾನಂದ ಗಜ್ವಿ. ಇಬ್ಬರು ಮಹಾನ್ ದೇಶ ಪ್ರೇಮಿಗಳ ವ್ಯಕ್ತಿತ್ವ ಬಿಂಬಿಸುವ ನಾಟಕವಿದು. ಈ ನಾಟಕದಲ್ಲಿ ಎರಡೇ ಪ್ರಮುಖ ಪಾತ್ರದಾರಿಗಳಾಗಿದ್ದರೂ ಜನಸಾಮಾನ್ಯರ ಪ್ರತಿಬಿಂಬವಾಗಿ ವಿದೂಷಕ ಪಾತ್ರ ಸೃಷ್ಟಿ ಮಹತ್ವದಾಗಿತ್ತು ಎಂದು ಅವರು ಹೇಳಿದರು.

ಕಸ್ತೂರಬಾ ನಾಟಕ ಬರೆಯಲು



ಡಾ. ಡಿ.ಎಸ್. ಚೌಗಲೆ

ರಂಗಭೂಮಿಯ ನಿರ್ದೇಶಕರ ಹುಲಗಪ್ಪ ಕಟ್ಟಿಮನಿ ಅವರೇ ಕಾರಣ ಎಂದರು. ಕಾರ್ಗತ್ತಲ್ಲನ್ನು ಹೊಡೆದೋಡಿಸುವ ವ್ಯಕ್ತಿತ್ವ ಬಾಪೂವಿನದ್ದು, ಕಸ್ತೂರಬಾ ಪಾತ್ರ ಎಷ್ಟು ಮಹತ್ವದ್ದೆಂದು ಈ ನಾಟಕ ಕಟ್ಟಿಕೊಡುತ್ತದೆ ಎಂದರು. ರಂಗಭೂಮಿ ಮೂಲಕ ಮನುಷ್ಯನ ಮಾನಸಿಕ ಚಿಕಿತ್ಸೆಯ ಪ್ರಯೋಗವನ್ನಾಗಿ ಮಾಡಿದವರು ಹುಲಗಪ್ಪ ಕಟ್ಟಿಮನಿ ಎಂದರು. ಕಸ್ತೂರಬಾ ನಾಟಕವನ್ನು ಮೈಸೂರಿನ ಕಾರಾಗೃಹ ವಾಸಿಗಳಿಂದ ಸಿದ್ಧಪಡಿಸಿದರು. ಹೀಗೆ ಗಾಂಧೀಜಿ ವ್ಯಕ್ತಿತ್ವದ ಪ್ರಭಾವ ಅವರ ತತ್ವಾದರ್ಶಗಳು ಜನಮಾನಸದ ಮೇಲೆ ಬೀರಿದ ಪ್ರಭಾವದ ಕುರಿತು ಉದಾಹರಣೆ ಸಹಿತ ವಿವರಿಸಿದರು.

ಹಿರಿಯ ರಂಗಕರ್ಮಿ ಶಿವಾನಂದ ಇಂಗಳೇಶ್ವರ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ಪುಣ್ಯಸ್ಮರಣೆ ಅಂಗವಾಗಿ 'ಹುತಾತ್ಮರ ದಿನಾಚರಣೆ'ಯ ಹಿನ್ನೆಲೆಯಲ್ಲಿ ಈ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು. ಮಹಾತ್ಮ ಗಾಂಧೀಜಿ ಅವರು ಅಹಿಂಸೆ ಮತ್ತು ಶಾಂತಿ ಮಂತ್ರದ ಮೂಲಕ ಹೋರಾಟ ನಡೆಸಿ ಭಾರತವನ್ನು ಬ್ರಿಟೀಷರಿಂದ ಮುಕ್ತಗೊಳಿಸಿ ಸ್ವಾತಂತ್ರ್ಯ ತಂದು ಕೊಟ್ಟಿದ್ದಾರೆ. ಮಹಾತ್ಮ ಅವರೂ ಸೇರಿದಂತೆ ಹಲವಾರು ವೀರರು ತ್ಯಾಗ ಬಲಿದಾನದ ಮೂಲಕ ಸ್ವಾತಂತ್ರ್ಯ ದೊರಕಿದೆ. ಸ್ವಾತಂತ್ರ್ಯ ಸೇನಾನಿಗಳನ್ನು ಈ ಸಂದರ್ಭ ಸ್ಮರಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದು ಹೇಳಿದರು. ಮಹಾತ್ಮ ಗಾಂಧಿ ಅವರು ಅಸಹಕಾರ ಚಳುವಳಿ, ಉಪ್ಪಿನ ಸತ್ಯಾಗ್ರಹ ಸೇರಿದಂತೆ ಅನೇಕ ಚಳುವಳಿಗಳ ಮೂಲಕ ಹಾಗೂ ತಮ್ಮ ಪ್ರಾಣ ದೇಶಕ್ಕಾಗಿ ಪಣಕ್ಕಿಟ್ಟು ಭಾರತಕ್ಕೆ ಸ್ವಾತಂತ್ರ್ಯ ಗಳಿಸಿಕೊಟ್ಟರು. ಅದರಂತೆ ನಮ್ಮ ಕನ್ನಡ ರಂಗಭೂಮಿಯಲ್ಲಿ ಯಾವ ರೀತಿಯ ಪ್ರಯೋಗಗಳಾಗಿವೆ ಅವರ ಆದರ್ಶಗಳ ಕುರಿತು ರಂಗಮಂಟಪದ ಮೇಲೆ ಬೆಳಕು ಚೆಲ್ಲುವ ವಿಷಯ ಅವಗಾಹಿಸುವುದಾಗಿದೆ ಎಂದು ನುಡಿದು, ಸ್ವಾಗತಿಸಿದರು. ಸಂಗಪ್ಪ ವಗ್ಗರ್ ಅವರು ಸಂವಾದ ನಿರ್ವಹಿಸಿದರು. ಪ್ರೊ: ಬಿ.ಆರ್. ಪೋಲೀಸ್ ಪಾಟೀಲ, ಡಾ.ವೆಂಕಟೇಶ್ ಮರಾಠೆ, ಬೆಂಗಳೂರಿನ ಶರಣ್ ಮ್ಯೂಸಿಕ್ ಅಕಾಡೆಮಿಯ ಶರಣ್ ಚೌಧರಿ ಅವರ ಸಹಕಾರ. ಟಿ.ಎಸ್. ರಮೇಶ ಅವರು ತಾಂತ್ರಿಕ ಸಹಕಾರ ನೀಡಿದರು.

**ಅರವಿಂದ ಬಿಜ್ಜೈ**

# ಶಿಕ್ಷಣದ ಗುಣಮಟ್ಟದಲ್ಲಿ ಶಿಕ್ಷಕರ ಪಾತ್ರ ಕುರಿತ ವಿಚಾರಗೋಷ್ಠಿ



ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ವತಿಯಿಂದ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಶಿಕ್ಷಕ ವೃಂದದವರಿಗೆ 'ಶಿಕ್ಷಣದ ಗುಣಮಟ್ಟದಲ್ಲಿ ಶಿಕ್ಷಕರ ಪಾತ್ರ ಹಾಗೂ ಶಿಕ್ಷಕರ ಹಕ್ಕು ಮತ್ತು ಕರ್ತವ್ಯ' ವಿಷಯದ ಕುರಿತ ವಿಚಾರ ಸಂಕಿರಣವನ್ನು ದಿನಾಂಕ 13.02.2021ರಂದು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಲಾಗಿತ್ತು. ದೆಹಲಿ ಶಿಕ್ಷಣ ಇಲಾಖೆ, ಪಶ್ಚಿಮ–ಎ ನವದೆಹಲಿ ಇದರ ಉಪನಿರ್ದೇಶಕ ಡಾ. ಮಲ್ಲಿಕಾರ್ಜುನ ಕೆ.ಎಸ್. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿದ್ದರು. ಅವರು ಶಿಕ್ಷಕರನ್ನು ಉದ್ದೇಶಿಸಿ ಮಾತನಾಡುತ್ತ ಸಮಾಜದಲ್ಲಿ ಶಿಕ್ಷಕರ ಪಾತ್ರ ಮಹತ್ತರವಾಗಿದೆ. ಶಿಕ್ಷಕರ ಕಾರ್ಯಕ್ಷಮತೆಯೇ ಶಿಕ್ಷಣದ ಗುಣಮಟ್ಟವನ್ನು ನಿರ್ಧರಿಸುತ್ತದೆ. ಫಲಿತಾಂಶಕ್ಕಿಂತಲೂ ಮೊದಲು ಮಕ್ಕಳ ಹಾಜರಾತಿಯ ಬಗ್ಗೆ ಗಮನಹರಿಸಬೇಕು. ವಿದ್ಯಾರ್ಥಿಗಳಿಗೆ ಸಿಬಿಎಸ್‌ಇಯ ಪರಿಷ್ಕೃತ ಪಠ್ಯಕ್ರಮ, ಪರೀಕ್ಷೆಯನ್ನು ಬರೆಯುವ ತಂತ್ರ, ವಿಧಾನ ತಿಳಿಸಿಕೊಡಬೇಕು. ಶಿಕ್ಷಕರಾದ ನೀವು ಕಡಿಮೆ ಕೆಲಸ ಮಾಡಿ, ತಂತ್ರ ವಿಧಾನಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿ ಹೇಳಬೇಕು. ಈ ದಿನಗಳಲ್ಲಿ ಶಿಕ್ಷಕರ ಕೆಲಸ ಹೆಚ್ಚಾಗಿದೆ, ವಿದ್ಯಾರ್ಥಿಗಳ ಕೆಲಸ ಕಡಿಮೆಯಾಗಿದೆ. ವಿದ್ಯಾರ್ಥಿಗಳಿಗೆ ಪಠ್ಯಕ್ರಮಾನುಗತವಾಗಿ ಓದುವ ಕಲಿಕಾ ಸಿದ್ಧಾಂತಗಳನ್ನು ಹಾಗೂ ಕೌಶಲ್ಯಗಳನ್ನು ಹೇಳಿಕೊಡಬೇಕು. ಮುಖ್ಯವಾಗಿ ಶಿಕ್ಷಕರು ತಾವು ಕಲಿಸುವ ವಿಷಯದ ಕುರಿತಾಗಿ ಪರಿಣತಿ ಹೊಂದಿರುವುದು ಅಗತ್ಯವಿದೆ. ಹಾಗಾದಲ್ಲಿ ಕಲಿಕೆಯು ಕೂಡ ಆಸಕ್ತಿದಾಯಕವಾಗಿರುತ್ತದೆ. ಶಿಕ್ಷಕ ವೃತ್ತಿಗೆ ಬಂದ ಮೇಲೂ ಕಲಿಕೆ ನಿರಂತರವಾಗಿರಬೇಕು. ಶಿಕ್ಷಕ ಅಧ್ಯಯನಶೀಲನಾಗಿದ್ದರೆ ಮಾತ್ರ ಪರಿಪೂರ್ಣ ಶಿಕ್ಷಕನಾಗಲು ಸಾಧ್ಯ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ ಸಂಸ್ಥೆಯ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಅವರು ಆನ್‌ಲೈನ್ ಶಿಕ್ಷಣ ಬಹಳಷ್ಟು ಪರಿಣಾಮಕಾರಿಯಾಗಿಲ್ಲ ಎಂಬುವುದು ಎಲ್ಲರೂ ತಿಳಿದಂತಹ ವಿಚಾರ. ಇದೀಗ 9ನೇ ತರಗತಿಯಿಂದ 12ನೇ ತರಗತಿಯವರೆಗೆ ಶಾಲೆ ಪುನರಾರಂಭಗೊಂಡಿರುವುದು ಒಳ್ಳೆಯ ಬೆಳವಣಿಗೆ. ಶಿಕ್ಷಕರಿಗೆ ಈ ಶೈಕ್ಷಣಿಕ ವರ್ಷ ದೊಡ್ಡ ಸವಾಲಾಗಿದೆ. ಶಿಕ್ಷಕರು ತಮ್ಮಲ್ಲಿರುವ ಕೌಶಲ್ಯವನ್ನು ಮಕ್ಕಳಿಗೆ ತಲುಪಿಸುವ ಪ್ರಯತ್ನ ಮಾಡಬೇಕು. ಹಾಗೆಯೇ ನಮ್ಮ ಶಾಲೆ, ನಮ್ಮ ಮಕ್ಕಳು ಎಂಬ ವೃತ್ತಿಧರ್ಮವನ್ನು ಪಾಲಿಸಿದರೆ ಶಿಕ್ಷಣದ ಗುಣಮಟ್ಟದ ಜೊತೆ ಉತ್ತಮ ಫಲಿತಾಂಶ ಪಡೆಯುವುದರಲ್ಲಿ ಸಂಶಯವಿಲ್ಲ. ಸರಕಾರದಿಂದ ಸಿಗುವ ಎಲ್ಲಾ ಸೌಲಭ್ಯಗಳು ಶಿಕ್ಷಕರಿಗೆ ದೊರಕುವಂತೆ ಅನುಕೂಲಗೊಳಿಸಲು ಆಡಳಿತ ಮಂಡಳಿಯು ಪೂರ್ಣ ಸಹಕಾರ ನೀಡುತ್ತದೆ ಎಂದು ಹೇಳಿದರು.

ಗೌರವ ಖಜಾಂಚಿ ಟಿ.ಪಿ. ಬೆಳ್ಳಿಯಪ್ಪ ಉಪಸ್ಥಿತರಿದ್ದರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿ, ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ವ್ಯವಸ್ಥಾಪಕ ಡಾ. ಎಂ.ಎಸ್. ಶಶಿಕುಮಾರ್ ಸ್ವಾಗತಿಸಿದರು. ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲ ಪ್ರಶಾಂತ ಕುಮಾರ್ ವಂದಿಸಿದರು. ಶಿಕ್ಷಕಿ ಪರಿಮಳಾ ಕಾರ್ಯಕ್ರಮ ನಿರೂಪಿಸಿದರು.

**ಅರವಿಂದ ಬಿಜ್ಜಿ**


### Statement of Ownership and other Particulars about
### Delhi Karnataka Sangha's ABHIMATA
### FORM-IV (See Rule 8)

| | | |
|---|---|---|
| **Place of Publication** | : | Delhi Karnataka Sangha, New Delhi |
| **Periodicity of Pub** | : | Monthly |
| **Printers Name** | : | M/s Saujanya Printing Press, C-95, Okhla Industrial Area, Phase-I, New Delhi-110020 |
| **Publishers Name** | : | C.M. Nagaraja |
| **Nationality** | : | Indian |
| **Address** | : | Delhi Karnataka Sangha Rao Tularam Marg, Sector-12, R.K. Puram, New Delhi - 110022 |
| **Editor's Name** | : | Dr. Avanindranath Rao Y |
| **Nationality** | : | Indian |
| **Address** | : | As Above |
| **Name & Address** of Individual who own the News Paper | : | Delhi Karnataka Sangha Rao Tularam Marg, Sector-12 R.K. Puram, New Delhi- 110022 |

I, **C.M. Nagaraja,** hereby declare that the particulars given above are true to the best of my knowledge and belief.

**09.03.2021** **Sd\-**
**New Delhi** **Publisher**


## ಬಿ.ಜಿ. ಸುಂದರ್ ಸಿಂಗ್ ನಿಧನ



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯ ಶ್ರೀ ಬಿ.ಜಿ. ಸುಂದರ್ ಸಿಂಗ್ ಅವರು ದಿನಾಂಕ 02.03.2021ರಂದು ನಿಧನರಾಗಿದ್ದಾರೆ.

ಭಾರತ ಸರಕಾರ ವಿಜ್ಞಾನ ಮತ್ತು ತಂತ್ರಜ್ಞಾನ ಮಂತ್ರಾಲಯದ ಡಿಎಸ್‌ಐಆರ್ ನಲ್ಲಿ ವಿಜ್ಞಾನಿಯಾಗಿ ಸೇವೆ ಸಲ್ಲಿಸಿದ್ದರು. ಕೇಂದ್ರ ಸಚಿವಾಲಯ ಗ್ರಂಥಾಲಯದಲ್ಲೂ ಕೆಲ ಕಾಲ ಸಹಾಯಕ ಗ್ರಂಥಾಲಯ ಮತ್ತು ಮಾಹಿತಿ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು. ನಿವೃತ್ತಿಯ ನಂತರ ಬೆಂಗಳೂರಿನಲ್ಲಿ ವಾಸವಾಗಿದ್ದರು.

ಅವರ ಧರ್ಮಪತ್ನಿ ಅರುಣಾ ಪಿ.ಆರ್. ದೆಹಲಿ ಕರ್ನಾಟಕ ಸಂಘ ಮತ್ತು ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್‌ನ ಚಟುವಟಿಕೆಗಳಲ್ಲಿ ತುಂಬಾ ಸಕ್ರಿಯರಾಗಿದ್ದರು. ಅಗಲಿದ ಸುಂದರ್ ಸಿಂಗ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.

# ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ನೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-

**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-

**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-

**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ದವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-

**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ. ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-

**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-

**ನಾನು–ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-

**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-

**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-


ರಾಷ್ಟ್ರದ ರಾಜಧಾನಿಯಲ್ಲಿ
ಕನ್ನಡಿಗರೊಬ್ಬರ ಬಹುವರ್ಣದ
ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಮತ್ತು
ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ
ಕಾರ್ಯಗಳನ್ನು ಸಮಯಕ್ಕೆ
ಸರಿಯಾಗಿ ಅಚ್ಚುಕಟ್ಟಾಗಿ
ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್,
ಪ್ರಿಂಟಿಂಗ್ ಮತ್ತು ಬೈಂಡಿಂಗ್
ಕೆಲಸಗಳಿಗಾಗಿ ದಯವಿಟ್ಟು
ಸಂಪರ್ಕಿಸಿ

**SAUJANYA**
**PRINTING PRESS**
A HOUSE OF QUALITY PRINTING
Office :
C-95, Okhla Industrial Area
Phase-I, New Delhi – 110 020
Ph : 40520770
M : 9811104398, 9811604398

Delhi Karnataka Sangha Abhimata
March-2021, Vol. No.31, Issue No. 6, Price Rs.1/-
RNI Regn. No. 53405/91, DL-SW-1/4016/19-21
Date of Publication : March 8th / 9th, Posting Date : 10th / 11th, Total Pages-20, Monthly-Language Kannada
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y



ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಇರುವ ಕಲಾವಿದೆ ವಿ. ಅಂಜಲಿ ಅವರ ಕಲಾಕೃತಿ